ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ

NIMMURU SUDDI

ಸಂಪಾದಕರು: ಸುಂದರ್

Editor : Sundar

ಏಕ ಕಾಲಕ್ಕೆ
ಬಳ್ಳಾರಿ,
ಕೊಪ್ಪಳ,
ಯಾದಗಿರಿ,
ರಾಯಚೂರು,
ಕಲಬುರ್ಗಿ,
ಬೀದರ,
ವಿಜಯನಗರ
ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 224 RNI Number : KNKAN/25/A2770 25-08-2026 Tuesday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :224 ರಾಯಚೂರು 25-08-2026 ಮಂಗಳವಾರ ಪುಟ 04 ಬೆಲೆ ರೂ.2/- ಮೊ:8660146563

ಪೋಲಿಸ್ ಠಾಣೆಯಲ್ಲಿ ಈದ್ ಮಿಲಾದ್ ಶಾಂತಿಸಭೆ. ಶಾಂತಿ ಸೌಹಾರ್ದತೆಯಿಂದ ಹಬ್ಬ ಆಚರಿಸಿ - ಚಂದ್ರಶೇಖರ್ ನಾಯಕ



ಸಿರವಾರ.ಆ24-

ಈದ್-ಮಿಲಾದ್ ಹಬ್ಬವು ಸಹೋದರತ್ವ, ಸೌಹಾರ್ದತೆ ಹಾಗೂ ಪರಸ್ಪರ ಗೌರವದ ಸಂದೇಶ ಸಾರುವ ಹಬ್ಬವಾಗಿದ್ದು, ಯಾವುದೇ ರೀತಿಯ ಅಹಿತಕರ ಘಟನೆಗಳಿಗೆ ಅವಕಾಶ ನೀಡದೆ ಶಾಂತಿ ಸೌಹಾರ್ದತೆಯಿಂದ ಹಬ್ಬ ಆಚರಿಸುವಂತೆ ಸಿಂಧನೂರು ಡಿವೈಎಸ್ಪಿ ಚಂದ್ರಶೇಖರ ನಾಯಕ ಹೇಳಿದರು.

ಪಟ್ಟಣದ ಪೊಲೀಸ್ ಠಾಣೆಯಲ್ಲಿ ಈದ್ ಮಿಲಾದ್ ಶಾಂತಿಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿ ಹಬ್ಬಗಳು ಸಮಾಜದಲ್ಲಿ ಸೌಹಾರ್ದತೆ ಮತ್ತು ಭಾತೃತ್ವ ಹೊಂದಿರುವ ಸಂಕೇತ. ಮೆರವಣಿಗೆ

3 ನೇ ಪುಟಕ್ಕೆ

ನಗರ-ಗ್ರಾಮೀಣ ಕ್ಷೇತ್ರದ ಕರಡು ಮತದಾರರ ಪಟ್ಟಿ ಪ್ರಕಟ ಸುರೇಶ ವರ್ಮಾ

ರಾಯಚೂರು, ಆ.24:

ಎರಡು ತಿಂಗಳಿನಿಂದ ಬೂತ್ ಮಟ್ಟದ ಅಧಿಕಾರಿಗಳು, ಸೂಪರ್‌ವೈಸರ್‌ಗಳು ಹಾಗೂ ನೋಡಲ್ ಅಧಿಕಾರಿಗಳು ನಿರಂತರವಾಗಿ ಕಾರ್ಯನಿರ್ವಹಿಸಿ ಸಿದ್ಧಪಡಿಸಿರುವ ರಾಯಚೂರು ನಗರ ಮತ್ತು ಗ್ರಾಮೀಣ ವಿಧಾನಸಭಾ ಕ್ಷೇತ್ರಗಳ ಕರಡು ಮತದಾರರ ಪಟ್ಟಿಯನ್ನು ಸೋಮವಾರ ಪ್ರಕಟಿಸಲಾಗಿದೆ ಎಂದು ತಹಶೀಲ್ದಾರ್ ಸುರೇಶ ವರ್ಮಾ ತಿಳಿಸಿದರು.

ನಗರದ ಹಳೆ ಸಿ.ಎಂ.ಸಿ. ಕಚೇರಿ ಸಭಾಂಗಣದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಯಚೂರು ಗ್ರಾಮೀಣ ಕ್ಷೇತ್ರದಲ್ಲಿ ಒಟ್ಟು 2,39,883 ಮತದಾರರಿದ್ದು, 1,98,809 ಮಂದಿಯನ್ನು ಮ್ಯಾಪಿಂಗ್ ಮಾಡಿ ಅರ್ಹ ಮತದಾರರೆಂದು ಗುರುತಿಸಲಾಗಿದೆ.

ಇದು ಶೇ.82.88ರಷ್ಟಾಗಿದೆ. ಉಳಿದ 41,074 ಮಂದಿಯನ್ನು ಗೈರು (), ಸ್ಥಳಾಂತರ () ಹಾಗೂ ಮರಣ () ವಿಭಾಗಗಳಲ್ಲಿ ಗುರುತಿಸಲಾಗಿದೆ ಎಂದರು.

ಗ್ರಾಮೀಣ ಕ್ಷೇತ್ರದಲ್ಲಿ ಈ ಹಿಂದೆ 275 ಮತಗಟ್ಟೆಗಳಿದ್ದು, ಇದೀಗ ಮೂರು ಮತಗಟ್ಟೆಗಳನ್ನು ಹೆಚ್ಚಿಸಿ 278 ಮತಗಟ್ಟೆಗಳನ್ನು ಮಾಡಲಾಗಿದೆ. ಸುಮಾರು 14 ಸಾವಿರ ಪ್ರಕರಣಗಳಲ್ಲಿ ಹಿಯರಿಂಗ್ ನಡೆಸಿ, ದಾಖಲೆಗಳನ್ನು ಪರಿಶೀಲಿಸಿದ ನಂತರ ಅರ್ಹರನ್ನು ಅಂತಿಮ ಮತದಾರರ ಪಟ್ಟಿಗೆ ಸೇರಿಸಲಾಗುವುದು ಎಂದು ಹೇಳಿದರು.

ರಾಯಚೂರು ನಗರ ಕ್ಷೇತ್ರದಲ್ಲಿ ಒಟ್ಟು 2,55,403 ಮತದಾರರಿದ್ದು, 1,80,072 ಮಂದಿಯನ್ನು ಅರ್ಹ ಮತದಾರರೆಂದು ಗುರುತಿಸಲಾಗಿದೆ. ಸುಮಾರು ಶೇ.70ರಷ್ಟು ಮತದಾರರ ಮ್ಯಾಪಿಂಗ್ ಪೂರ್ಣಗೊಂಡಿದ್ದು, 75,331 ಮಂದಿಯನ್ನು // ವಿಭಾಗದಲ್ಲಿ ಗುರುತಿಸಲಾಗಿದೆ ಎಂದು ತಿಳಿಸಿದರು.

ಕರಡು ಮತದಾರರ ಪಟ್ಟಿಯನ್ನು ಈಗಾಗಲೇ ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ನೀಡಲಾಗಿದ್ದು, ವೆಬ್‌ಸೈಟ್‌ನಲ್ಲಿಯೂ

3 ನೇ ಪುಟಕ್ಕೆ

5000 ನೋಟ್‌ಬುಕ್ ವಿತರಣೆ; ಸರ್ಕಾರಿ ಶಾಲಾ ಮಕ್ಕಳಿಗೆ ನೆರವಿನ ಹಸ್ತ

40 ಸರ್ಕಾರಿ ಶಾಲೆಗಳ ಮಕ್ಕಳಿಗೆ ಶೈಕ್ಷಣಿಕ ಸಾಮಗ್ರಿ ವಿತರಣೆ

ಆರ್.ಕೆ. ಫೌಂಡೇಶನ್, ದಾನಿಗಳ ಸೇವೆಗೆ ಮೆಚ್ಚುಗೆ

ರಾಯಚೂರು,ಆ.24-

ಸರ್ಕಾರಿ ಶಾಲೆಗಳ ಮಕ್ಕಳ ಶೈಕ್ಷಣಿಕ ಪ್ರಗತಿಗೆ ನೆರವಾಗುವ ನಿಟ್ಟಿನಲ್ಲಿ ಆರ್.ಕೆ. ಫೌಂಡೇಶನ್ ಬೆಂಗಳೂರು ಹಾಗೂ ತಾಲೂಕಿನ ವಿವಿಧ ದಾನಿಗಳ ಸಹಕಾರದೊಂದಿಗೆ 40 ಸರ್ಕಾರಿ ಶಾಲೆಗಳ ಮಕ್ಕಳಿಗೆ 5,000 ನೋಟ್‌ಬುಕ್‌ಗಳನ್ನು ಉಚಿತವಾಗಿ ವಿತರಿಸಿರುವುದು ಸಮಾಜಮುಖಿ ಕಾರ್ಯಕ್ಕೆ ಮಾದರಿಯಾಗಿದೆ ಎಂದು ಡಾ. ಸಂದೀಪ ಪಾಟೀಲ ಹೇಳಿದರು.



ರಾಯಚೂರು ತಾಲೂಕಿನ ಕೆಇಬಿ ಶಾಲೆಯಲ್ಲಿ ನಡೆದ ನೋಟ್‌ಬುಕ್ ವಿತರಣಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸರ್ಕಾರಿ ಶಾಲೆಗಳ ಅಭಿವೃದ್ಧಿ ಹಾಗೂ ಬಡ ಮಕ್ಕಳ ಶಿಕ್ಷಣಕ್ಕೆ ಸಂಘಟನೆಗಳು ಮತ್ತು ದಾನಿಗಳು ಕೈಜೋಡಿಸುವ ಅಗತ್ಯವಿದೆ. ನಂದೀಶ್-ಮಹಾಂತೇಶ ಬಿರಾದಾರ ನೇತೃತ್ವದ ತಂಡವು ಶಿಕ್ಷಕರ ಹಿತಾಸಕ್ತಿಗೆ ಮಾತ್ರ ಸೀಮಿತವಾಗದೆ, ಮಕ್ಕಳ ಹಾಗೂ ಶಾಲೆಗಳ ಅಭಿವೃದ್ಧಿಗಾಗಿ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿರುವುದು ಶ್ಲಾಘನೀಯ ಎಂದರು.

ಶಿಕ್ಷಕರ ಸಂಘಟನೆಗಳು ಸಮಾಜದ ಜವಾಬ್ದಾರಿಯನ್ನೂ ಹೊತ್ತುಕೊಳ್ಳಬೇಕು

ಹಿರಿಯರಾದ ನಂದೀಶ್ ಮಾತನಾಡಿ, ಸಂಘ-ಸಂಘಟನೆಗಳು ಕೇವಲ ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಹೋರಾಡುವುದಕ್ಕೆ ಸೀಮಿತವಾಗಬಾರದು. ಸರ್ಕಾರಿ ಶಾಲೆಗಳ ಮಕ್ಕಳ ಭವಿಷ್ಯ ಹಾಗೂ ಶಾಲೆಗಳ ಅಭಿವೃದ್ಧಿಗೆ ಕೈಜೋಡಿಸುವ ಮೂಲಕ ಸಮಾಜಕ್ಕೆ ತಮ್ಮ ಕೊಡುಗೆ ನೀಡಬೇಕು. ಮಹಾಂತೇಶ ಬಿರಾದಾರ ನೇತೃತ್ವದ ತಂಡ ಇಂತಹ ಕಾರ್ಯಗಳನ್ನು ನಿರಂತರವಾಗಿ

3 ನೇ ಪುಟಕ್ಕೆ

ಕನಿಷ್ಠ ವೇತನ ತಡೆಗೆ ಆಕ್ರೋಶ: ಸೆ. 2ರಿಂದ ಬೆಂಗಳೂರಿನಲ್ಲಿ ವಸತಿ ನಿಲಯ ಕಾರ್ಮಿಕರ ಅಹೋರಾತ್ರಿ ಧರಣಿ



ಮಾನ್ವಿ,ಆ.24-

ರಾಜ್ಯ ಸರ್ಕಾರವು ಪರಿಷ್ಕೃತ ಕನಿಷ್ಠ ವೇತನ ಜಾರಿಯನ್ನು ದಿಢೀರ್ ತಡೆಹಿಡಿದಿರುವುದನ್ನು ವಿರೋಧಿಸಿ, ಆಲ್ ಇಂಡಿಯಾ ಯುನೈಟೆಡ್ ಟ್ರೇಡ್ ಯೂನಿಯನ್ ಸೆಂಟರ್ ಸಂಯೋಜಿತ ಕರ್ನಾಟಕ ರಾಜ್ಯ ಸಂಯುಕ್ತ ವಸತಿ ನಿಲಯ ಕಾರ್ಮಿಕರ ಸಂಘದ ನೇತೃತ್ವದಲ್ಲಿ ಸೆಪ್ಟೆಂಬರ್ 2ರಿಂದ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ರಾಜ್ಯ ಮಟ್ಟದ ಅಹೋರಾತ್ರಿ ಪ್ರತಿಭಟನಾ ಧರಣಿ ಹಮ್ಮಿಕೊಳ್ಳಲಾಗಿದೆ. ಈ ಕುರಿತು ಸಂಘಟನೆಯ ನಿಯೋಗವು ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿ.

ನಂತರದಲ್ಲಿ ಕಾರ್ಮಿಕ ಸಂಘದ ತಾಲೂಕು ಅಧ್ಯಕ್ಷ ಹುಲುಗಪ್ಪ ಮಾತನಾಡಿ ಸರ್ಕಾರವು ಈ ಹಿಂದೆ ಕನಿಷ್ಠ ವೇತನವನ್ನು ಪರಿಷ್ಕರಿಸಿ ಹೆಚ್ಚಳ ಮಾಡಿದ್ದು, ಕಾರ್ಮಿಕರಲ್ಲಿ ಸಂತಸ ಮೂಡಿಸಿತ್ತು. ಆದರೆ ಈಗ ಏಕಾಏಕಿ ಪರಿಷ್ಕೃತ ವೇತನವನ್ನು ಮರುಪರಿಶೀಲಿಸಲು ಉಪಸಂಪುಟ ಸಮಿತಿ ರಚಿಸಿರುವುದು ಕಾರ್ಮಿಕ

3 ನೇ ಪುಟಕ್ಕೆ

ಸಚಿವ ಬಿ.ನಾಗೇಂದ್ರ ರಾಜೀನಾಮೆಗೆ ಆಗ್ರಹಿಸಿ ಅಹೋರಾತ್ರಿ ಧರಣಿಗೆ ಮುಂದಾದ ಪ್ರತಿಪಕ್ಷಗಳು

ಬೆಂಗಳೂರು, ಆ.24-

ಯೋಜನೆ ಮತ್ತು ಸಾಂಖ್ಯಿಕ ಖಾತೆ ಸಚಿವ ಬಿ. ನಾಗೇಂದ್ರ ಅವರ ರಾಜೀನಾಮೆಗೆ ಆಗ್ರಹಿಸಿ ಪ್ರತಿಪಕ್ಷಗಳು ನಡೆಸುತ್ತಿರುವ ಪ್ರತಿಭಟನೆ ಇಂದು ಕೂಡ ವಿಧಾನಸಭೆಯಲ್ಲಿ ಮುಂದುವರಿಯಿತು. ಸಚಿವರು ರಾಜೀನಾಮೆ ನೀಡುವವರೆಗೆ ಅಹೋರಾತ್ರಿ ಧರಣಿ ನಡೆಸುವುದಾಗಿ ಬಿಜೆಪಿ-ಜೆಡಿಎಸ್ ಶಾಸಕರು ಪ್ರಕಟಿಸಿದರು.ಇಂದು ಬೆಳಗ್ಗೆ ಸದನ ಸಮಾವೇಶಗೊಂಡಾಗ ಬಿಜೆಪಿ-ಜೆಡಿಎಸ್ ಶಾಸಕರು ತಮ್ಮ ತಮ್ಮ ಸ್ಥಾನಗಳಲ್ಲಿ ಎದ್ದು ನಿಂತು ಘೋಷಣೆಗಳನ್ನು ಕೂಗುತ್ತಾ ಸಚಿವ ನಾಗೇಂದ್ರ ಅವರ ರಾಜೀನಾಮೆಗೆ ಆಗ್ರಹಿಸಿದರು.

ಸಭಾಧ್ಯಕ್ಷ ಜಿ.ಎಸ್. ಪಾಟೀಲ್ ಅವರು ಸದನಕ್ಕೆ ಸಕಾಲಕ್ಕೆ ಆಗಮಿಸಿದ್ದ ಶಾಸಕರ ಹೆಸರನ್ನು ವಾಚಿಸುತ್ತಿದ್ದ ವೇಳೆ ಬಿಜೆಪಿ-ಜೆಡಿಎಸ್ ಶಾಸಕರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಗದ್ದಲ ಉಂಟುಮಾಡಿದರು. ಬಿಜೆಪಿ ಶಾಸಕ ಸುನೀಲ್‌ಕುಮಾರ್ ಮಾತನಾಡಿ, ಇಂಥ ಭಂಡ ಸರ್ಕಾರವನ್ನು



ನೋಡಿರಲಿಲ್ಲ ಎಂದು ಕಿಡಿಕಾರಿದರು.

ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಮಾತನಾಡಿ, ಒಬ್ಬ ವ್ಯಕ್ತಿಗಾಗಿ ಈ ರೀತಿ ಸದನದ ಸಮಯವನ್ನು ಹಾಳು ಮಾಡಬಾರದು. ಸಂವಿಧಾನಕ್ಕೂ ಗೌರವ ಇಲ್ಲದಂತಾಗಿದೆ. ನಾಗೇಂದ್ರ ಅವರನ್ನು ಸಂಪುಟದಿಂದ ವಜಾಗೊಳಿಸಬೇಕು. ಅವರು ರಾಜೀನಾಮೆ ನೀಡುವವರೆಗೆ ನಾವು ಹಗಲು-ರಾತ್ರಿ ಸದನದಲ್ಲೇ ಧರಣಿ ನಡೆಸುತ್ತೇವೆ. ಯಾವುದೇ ಕಾರಣಕ್ಕೂ ಪ್ರತಿಭಟನೆ ಹಿಂಪಡೆಯುವುದಿಲ್ಲ. ದಲಿತರ ಹಣ ಅಕ್ರಮ ವರ್ಗಾವಣೆ ಆರೋಪದ ಬಗ್ಗೆ ಚರ್ಚಿಸಲು ನಾವು ಸಿದ್ಧರಿದ್ದೇವೆ ಎಂದು ಹೇಳಿದರು.

ನಾವು ಮಾತನಾಡುವಾಗ ವಾರ್ತಾ ಇಲಾಖೆ ಲೈವ್‌ನಲ್ಲಿ ನಮ್ಮನ್ನು ತೋರಿಸುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ ಅಶೋಕ್, ವಾರ್ತಾ ಇಲಾಖೆ ಆಯುಕ್ತರ ವಿರುದ್ಧವೂ ಹರಿಹಾಯ್ದರು.ವಾಲ್ಮೀಕಿ ಅಭಿವೃದ್ಧಿ ನಿಗಮದ 187 ಕೋಟಿ ರೂ.ಗಳನ್ನು ಹಂಚಿಕೆ ಮಾಡಿಕೊಂಡಿದ್ದಾರೆ. ಅದಕ್ಕಾಗಿ ಸಚಿವರಿಂದ ರಾಜೀನಾಮೆ ಕೊಡಿಸುತ್ತಿಲ್ಲ. ಒಂದು ಕೋಟಿ ದಲಿತರು ಹೊರಗಡೆ ಇದ್ದಾರೆ ಎಂದು ಅವರು ವಾಗ್ದಾಳಿ ನಡೆಸಿದರು.

ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್ ಮಾತನಾಡಿ, ವಿರೋಧ ಪಕ್ಷಗಳಿಗೆ ಸದನದಲ್ಲಿ ಜ್ವಲಂತ ಸಮಸ್ಯೆಗಳ ಚರ್ಚೆ ಮಾಡಲು ಆಸಕ್ತಿ ಇಲ್ಲ. ರೈತರ ಸಮಸ್ಯೆ, ಬಿಡದಿ ಸಮಸ್ಯೆ ಸೇರಿದಂತೆ ಅನೇಕ ಜ್ವಲಂತ ಸಮಸ್ಯೆಗಳಿದ್ದರೂ ಇವರು ಪ್ರತಿಭಟನೆ ನಡೆಸುತ್ತಿದ್ದಾರೆ ಎಂದು ಆಕ್ಷೇಪಿಸಿದರು. ಬೆಂಗಳೂರು ನಗರಾಭಿವೃದ್ಧಿ ಸಚಿವ ಕೃಷ್ಣಭೈರೇಗೌಡ ಮಾತನಾಡಿ, ರಾಜ್ಯದಲ್ಲಿ ಮಳೆ ಕೊರತೆಯಿಂದ ಬರ ಪರಿಸ್ಥಿತಿ ಇದೆ. ರೈತರು ಸಂಕಷ್ಟದಲ್ಲಿದ್ದಾರೆ. ಆದರೂ ಈ ಬಗ್ಗೆ ಚರ್ಚೆ ನಡೆಸದೆ ಸದನದ ಸಮಯವನ್ನು ವ್ಯರ್ಥ ಮಾಡುತ್ತಿದ್ದಾರೆ ಎಂದು ಆಕ್ಷೇಪಿಸಿದರು.

ಕೆಪಿಎಸ್‌ಸಿ ಕುರಿತು ಚರ್ಚೆ ಮಾಡಲು ನಮಗೆ ಆಸಕ್ತಿ ಇಲ್ಲ ಎಂಬ ಆರೋಪ ಸರಿಯಲ್ಲ. ನಾವು ಅದರ ಬಗ್ಗೆ ಚರ್ಚೆಗೆ ಸಿದ್ಧರಿದ್ದೇವೆ ಎಂದು ಆಡಳಿತ ಪಕ್ಷದ ಸದಸ್ಯರು ಹೇಳಿದಾಗ, ಬಿಜೆಪಿ ಶಾಸಕ ಸುನೀಲ್‌ಕುಮಾರ್ ಮಾತನಾಡಿ, ಬರ ಸೇರಿದಂತೆ ಎಲ್ಲ ವಿಚಾರಗಳ ಬಗ್ಗೆಯೂ ಚರ್ಚೆಗೆ ನಾವು ಸಿದ್ಧರಿದ್ದೇವೆ. ಮೊದಲು ಸಚಿವರಿಂದ ರಾಜೀನಾಮೆ ಕೊಡಿಸಿ ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿ, ಕಾಗದಪತ್ರ, ದಾಖಲೆಗಳನ್ನು ಇಟ್ಟುಕೊಂಡು ಆರೋಪಿಸುವ ವಿಚಾರದ ಬಗ್ಗೆ ಮಾತನಾಡಲು ಬಿಜೆಪಿ ಸಿದ್ಧವಿಲ್ಲ ಎಂದು ಟೀಕಿಸಿದರು.ಅಷ್ಟರಲ್ಲಿ ಬಿಜೆಪಿ-ಜೆಡಿಎಸ್ ಶಾಸಕರು

3 ನೇ ಪುಟಕ್ಕೆ

ರಾಯಚೂರಿನಲ್ಲಿ 3.21 ಲಕ್ಷ ಮತದಾರರ ಹೆಸರು ಡಿಲೀಟ್

ಜಿಲ್ಲೆಯಲ್ಲಿ 13.93 ಲಕ್ಷ ಮತದಾರರ ಕರಡು ಪಟ್ಟಿ ಪ್ರಕಟ; ಆಕ್ಷೇಪಣೆಗೆ ಅ.22ರವರೆಗೆ ಅವಕಾಶ : ಪೂವಿತಾ ಎಸ್.

ರಾಯಚೂರು,ಆ.24-

2026ನೇ ಸಾಲಿನ ಕರಡು ಮತದಾರರ ಪಟ್ಟಿ ಪ್ರಕಟವಾಗಿದ್ದು, ರಾಯಚೂರು ಜಿಲ್ಲೆಯ ಏಳು ವಿಧಾನಸಭಾ ಕ್ಷೇತ್ರಗಳಲ್ಲಿ ಒಟ್ಟು 13,93,163 ಮತದಾರರು ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ. ಹಿಂದಿನ ಮತದಾರರ ಪಟ್ಟಿಗೆ ಹೋಲಿಸಿದರೆ ಬರೋಬ್ಬರಿ 3,21,396 ಮತದಾರರ ಹೆಸರುಗಳನ್ನು ತೆಗೆದು ಹಾಕಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಪೂವಿತಾ ಎಸ್. ತಿಳಿಸಿದರು.

ನಗರದ ಜಿಲ್ಲಾಡಳಿತ ಭವನದಲ್ಲಿ ಸೋಮವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮತದಾರರ ಪಟ್ಟಿಯಿಂದ



ತೆಗೆದುಹಾಕಲಾದವರಲ್ಲಿ 61,385 ಮಂದಿ ಮೃತಪಟ್ಟವರು, 1,87,941 ಮಂದಿ ಶಾಶ್ವತವಾಗಿ ಸ್ಥಳಾಂತರ 'ಗೊಂಡವರು, 30,733 ಮಂದಿ ಗೈರು ಮತದಾರರು ಹಾಗೂ 365 ಮಂದಿ ಇತರ ವರ್ಗಕ್ಕೆ ಸೇರಿದವರು ಎಂದು ವಿವರಿಸಿದರು.

2025ರ ಮತದಾರರ ಪಟ್ಟಿಗೆ ಹೋಲಿಸಿದರೆ ಪ್ರಸಕ್ತ ಕರಡು ಪಟ್ಟಿಯಲ್ಲಿ 18.75ರಷ್ಟು ವ್ಯತ್ಯಾಸ ಕಂಡುಬಂದಿದೆ. ಈ ಹಿನ್ನೆಲೆಯಲ್ಲಿ ಸಾರ್ವಜನಿಕರು ತಮ್ಮ ಹೆಸರು ಮತದಾರರ ಪಟ್ಟಿಯಲ್ಲಿ ಇರುವುದನ್ನು ಪರಿಶೀಲಿಸಿಕೊಳ್ಳುವುದು ಹಾಗೂ ಹೆಸರು ಕೈಬಿಟ್ಟಿದ್ದರೆ ನಿಗದಿತ ಅವಧಿಯಲ್ಲಿ ಆಕ್ಷೇಪಣೆ ಸಲ್ಲಿಸುವುದು ಅತ್ಯಂತ ಮುಖ್ಯವಾಗಿದೆ.

ಅ.27ರಿಂದ ಆಕ್ಷೇಪಣೆಗೆ ಅವಕಾಶ

ಕರಡು ಮತದಾರರ ಪಟ್ಟಿಗೆ ಸಂಬಂಧಿಸಿದಂತೆ ಆಗಸ್ಟ್ 27ರಿಂದ ಅಕ್ಟೋಬರ್ 22, 2026ರವರೆಗೆ ಹಕ್ಕು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಹೆಸರು ಸೇರ್ಪಡೆ, ಹೆಸರು ತಿದ್ದುಪಡಿ, ವಿಳಾಸ ಬದಲಾವಣೆ ಸೇರಿದಂತೆ ಅಗತ್ಯ ಪರಿಷ್ಕರಣೆಗಳಿಗೆ ಸಾರ್ವಜನಿಕರು ಸೂಕ್ತ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬಹುದು.

ಅಕ್ಟೋಬರ್ 1, 2026ಕ್ಕೆ 18 ವರ್ಷ ಪೂರ್ಣಗೊಳ್ಳುವ ಯುವಕರು ಫಾರ್ಮ್-6 ಮೂಲಕ ಆನ್‌ಲೈನ್ ಅಥವಾ ಬೂತ್ ಮಟ್ಟದ ಅಧಿಕಾರಿಗಳ ಮೂಲಕ ಹೊಸ ಮತದಾರರಾಗಿ ನೋಂದಾಯಿಸಿಕೊಳ್ಳಬಹುದು. ಎಲ್ಲಾ ಹಕ್ಕು ಮತ್ತು ಆಕ್ಷೇಪಣೆಗಳ ವಿಲೇವಾರಿ ಬಳಿಕ ಅಕ್ಟೋಬರ್ 27ರಂದು ಅಂತಿಮ ಮತದಾರರ ಪಟ್ಟಿ ಪ್ರಕಟಿಸಲಾಗುವುದು ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಕರಡು ಪಟ್ಟಿಯಲ್ಲಿ ವಿಕಲಚೇತನ ಮತದಾರರು 17,048 ಮಂದಿ ಇದ್ದಾರೆ ಎಂದು ಅವರು ಮಾಹಿತಿ ನೀಡಿದರು.

ಮತದಾರರು ತಮ್ಮ ಹೆಸರು, ವಿಳಾಸ ಮತ್ತು ಇತರ ವಿವರಗಳನ್ನು ಪರಿಶೀಲಿಸಿಕೊಂಡು, ಯಾವುದೇ ತಪ್ಪು ಅಥವಾ ಹೆಸರು ಕೈಬಿಟ್ಟಿರುವುದು ಕಂಡುಬಂದಲ್ಲಿ ನಿಗದಿತ

3 ನೇ ಪುಟಕ್ಕೆ

ಅವಧೂತ ವಿನಯ ಗುರೂಜಿ ಹುಟ್ಟುಹಬ್ಬ ಆಚರಣೆ



ರಾಯಚೂರು,ಆ.24-

ನಗರದ ಅಂಧ ಮಕ್ಕಳ ಶಾಲೆಯಲ್ಲಿ ಅವಧೂತ ವಿನಯ ಗುರೂಜಿ ಅವರ ಹುಟ್ಟುಹಬ್ಬವನ್ನು ಭಕ್ತರು ಹಾಗೂ ಗಣ್ಯರ ಸಮ್ಮುಖದಲ್ಲಿ ಸಂಭ್ರಮದಿಂದ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಮಾಜಿ ಸಚಿವ ಕೆ. ಶಿವನಗೌಡ ನಾಯಕ, ಮಾಜಿ ಶಾಸಕ ತಿಪ್ಪರಾಜು ಹವಾಲ್ದಾರ್ ಲಕ್ಷ್ಮಿಪತಿ ಗಣದಾಳ ಸೇರಿದಂತೆ ವಿನಯ ಗುರೂಜಿ ಅವರ ಭಕ್ತರು ಹಾಗೂ ಅಭಿಮಾನಿಗಳು ಉಪಸ್ಥಿತರಿದ್ದು, ಹುಟ್ಟುಹಬ್ಬದ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

ಮಾಜಿ ಸಚಿವ ಕೆ. ಶಿವನಗೌಡ ನಾಯಕ ಅವರು ವಿನಯ ಗುರೂಜಿ ಅವರಿಗೆ ಹುಟ್ಟುಹಬ್ಬದ ಶುಭಾಶಯಗಳನ್ನು ಕೋರಿ, ಉತ್ತಮ ಆರೋಗ್ಯ, ದೀರ್ಘಾಯುಷ್ಯ ಹಾಗೂ ಸಮಾಜ ಸೇವೆಯಲ್ಲಿ ಇನ್ನಷ್ಟು ಯಶಸ್ಸು ದೊರೆಯಲಿ

3 ನೇ ಪುಟಕ್ಕೆ

10 ಜನ್ಮವಾದರೂ ಜೇವರ್ಗಿ ಕ್ಷೇತ್ರದ ಜನರ ಋಣ ತೀರಿಸಲು ಸಾಧ್ಯವಿಲ್ಲ: ಸಚಿವ ಡಾ.ಅಜಯ್ ಸಿಂಗ್



ಜೇವರ್ಗಿ,ಆ.24-

ಜೇವರ್ಗಿ ಕ್ಷೇತ್ರದ ಜನರು ತಮ್ಮ ಕುಟುಂಬದ ಮೇಲೆ ಇಟ್ಟಿರುವ ಪ್ರೀತಿ, ವಿಶ್ವಾಸ ಹಾಗೂ ಆಶೀರ್ವಾದಕ್ಕೆ 10 ಜನ್ಮ ಎತ್ತಿದರೂ ಋಣ ತೀರಿಸಲು ಸಾಧ್ಯವಿಲ್ಲ ಎಂದು ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ.ಅಜಯ್ ಸಿಂಗ್ ಹೇಳಿದರು.

ಪಟ್ಟಣದ ಎಪಿಎಂಸಿ ಆವರಣದಲ್ಲಿ ಜೇವರ್ಗಿ ಹಾಗೂ ಯಡ್ರಾಮಿ ಬ್ಲಾಕ್ ಕಾಂಗ್ರೆಸ್ ಸಮಿತಿಗಳ ವತಿಯಿಂದ ಭಾನುವಾರ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

54 ವರ್ಷಗಳಿಂದ ಜೇವರ್ಗಿ ಕ್ಷೇತ್ರದ ಜನರು ತಮ್ಮ ಕುಟುಂಬಕ್ಕೆ ನಿರಂತರವಾಗಿ ಬೆಂಬಲ ನೀಡುತ್ತಾ ಬಂದಿದ್ದಾರೆ. ತಮ್ಮ ತಂದೆ ದಿವಂಗತ ಧರಂಸಿಂಗ್ ಅವರು ರಾಜ್ಯದ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ್ದು, ಇದೀಗ ಅವರ ಪುತ್ರನಾಗಿ ಸಚಿವನಾಗಿ ಜನರ ಸೇವೆ ಮಾಡುವ ಅವಕಾಶ ದೊರೆತಿದೆ. ಇದಕ್ಕೆ ಕ್ಷೇತ್ರದ ಜನರ ಪ್ರೀತಿ, ನಂಬಿಕೆ ಹಾಗೂ ಆಶೀರ್ವಾದವೇ ಕಾರಣ ಎಂದರು.

ಶಾಸಕರಾಗಿ ಕ್ಷೇತ್ರದಲ್ಲಿ ಹಲವು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದು, ಕೆಕೆಆರ್‌ಡಿಬಿ ಅಧ್ಯಕ್ಷರಾಗಿದ್ದ ಅವಧಿಯಲ್ಲಿಯೂ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಿದ್ದೇನೆ. ಇದೀಗ ಸಣ್ಣ ನೀರಾವರಿ ಸಚಿವನಾಗಿ ರೈತರ ಅಭಿವೃದ್ಧಿ, ಕ್ಷೇತ್ರದ ಸಮಗ್ರ ಅಭಿವೃದ್ಧಿ ಹಾಗೂ ರಾಜ್ಯದ ಪ್ರಗತಿಗೆ ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇನೆ. ಮನೆಯ ಮಗನಾಗಿ ಜನರೊಂದಿಗೆ ನಿಂತು, ತಮ್ಮ ಮೇಲಿಟ್ಟಿರುವ ವಿಶ್ವಾಸಕ್ಕೆ ತಕ್ಕಂತೆ ಕಾರ್ಯನಿರ್ವಹಿಸುವುದಾಗಿ ಭರವಸೆ ನೀಡಿದರು.

ಕಳೆದ ನಾಲ್ಕು ವರ್ಷಗಳಿಂದ ಕ್ಷೇತ್ರದ ಜನರು ತಮ್ಮ ಮೇಲೆ ಅಸಮಾಧಾನಗೊಂಡಿದ್ದರು. ಆದರೆ ಚುನಾವಣೆ ಸಂದರ್ಭದಲ್ಲಿ ಎಲ್ಲ ಕೋಪ, ಅಸಮಾಧಾನವನ್ನು ಮರೆತು, ಅವರೂ ನಮ್ಮವರೇ ಎಂಬ ಭಾವನೆಯಿಂದ ಮತ್ತೆ ಆಶೀರ್ವದಿಸಿ ಗೆಲ್ಲಿಸಿದ್ದಾರೆ. ಜನರ ಈ ಪ್ರೀತಿ ಮತ್ತು ವಿಶ್ವಾಸಕ್ಕೆ ತಮ್ಮ ಕುಟುಂಬ ಸದಾ ಋಣಿಯಾಗಿರುತ್ತದೆ ಎಂದು ಹೇಳಿದರು.

ನೀರಾವರಿ ಯೋಜನೆಗಳಿಗೆ ಆದ್ಯತೆ ನೀಡಿ :

ಶಾಸಕ ಅಲ್ಲಮಪ್ರಭು ಪಾಟೀಲ್ ಮಾತನಾಡಿ, ಜೇವರ್ಗಿ ಕ್ಷೇತ್ರದ ಜನರ ಒಳಿತಿಗಾಗಿ ಸದಾ ಕಾಳಜಿ ವಹಿಸುವ ನಾಯಕ ಡಾ. ಅಜಯ್ ಸಿಂಗ್. ಜನರ ಆರೋಗ್ಯದ ದೃಷ್ಟಿಯಿಂದ ಉಚಿತ ಆರೋಗ್ಯ ಶಿಬಿರಗಳನ್ನು ಆಯೋಜಿಸಿ, ಇದುವರೆಗೆ ಸುಮಾರು ಒಂದು ಲಕ್ಷ ಜನರಿಗೆ ಉಚಿತ ಚಿಕಿತ್ಸೆ ದೊರೆಯುವಂತೆ ಮಾಡಿದ್ದಾರೆ ಎಂದರು.

ಕೆಕೆಆರ್‌ಡಿಬಿ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಕ್ಷೇತ್ರದಲ್ಲಿ ಹಲವು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದಾರೆ. ಇದೀಗ ಸಣ್ಣ ನೀರಾವರಿ ಸಚಿವರಾಗಿರುವ ಅವರು ಜೇವರ್ಗಿ ಹಾಗೂ ಯಡ್ರಾಮಿ ಭಾಗದ ರೈತರ ಅನುಕೂಲಕ್ಕಾಗಿ ಅಗತ್ಯ ನೀರಾವರಿ ಯೋಜನೆಗಳನ್ನು ಜಾರಿಗೆ ತಂದು ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಮನವಿ ಮಾಡಿದರು.

ಸಚಿವರಾಗಿ ಜೇವರ್ಗಿ ಕ್ಷೇತ್ರಕ್ಕೆ ಮೊದಲ ಬಾರಿಗೆ ಆಗಮಿಸಿದ ಡಾ. ಅಜಯ್ ಸಿಂಗ್ ಅವರನ್ನು ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಅದ್ದೂರಿ ಮೆರವಣಿಗೆಯ ಮೂಲಕ ಸ್ವಾಗತಿಸಿ, ಅಭಿನಂದನಾ ಸಮಾರಂಭದಲ್ಲಿ ಸನ್ಮಾನಿಸಿದರು.

ಕಾರ್ಯಕ್ರಮದಲ್ಲಿ ಜೇವರ್ಗಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿದ್ದಲಿಂಗರೆಡ್ಡಿ ಇಟಗಿ, ಯಡ್ರಾಮಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರುಕುಂ ಪಟೇಲ್ ಈಜೇರಿ, ಜೇಸ್ಕಾಂ ಅಧ್ಯಕ್ಷ ಪ್ರವೀಣ್ ಕುಮಾರ್ ಹರವಾಳ, ನೀಲಕಂಠರಾವ್ ಮೂಲಗೆ, ರಾಜಶೇಖರ್ ಸೀರಿ, ಕಾಶಿರಾಯಗೌಡ ಯಲಗೋಡ, ಜಿಪಂ ಮಾಜಿ ಸದಸ್ಯ ಶಾಂತಪ್ಪ ಕೂಡಲಗಿ, ಕಾಸಿಂ ಪಟೇಲ್ ಮುದವಾಳ, ಗ್ಯಾರಂಟಿ ಯೋಜನೆ ಅಧ್ಯಕ್ಷ ಶೌಕತ್ ಅಲಿ ಆಲೂರು, ಚಂದ್ರಶೇಖರ ಪುರಾಣಿಕ, ಹಯ್ಯಾಳಪ್ಪ ಗಂಗಾಕರ್ ಅಬ್ದುಲ್ ರಹೆಮಾನ್ ಪಟೇಲ್, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಪ್ರತಾಪ್ ಕಟ್ಟಿ, ತಿಪ್ಪಣ್ಣ ಬಳಬಟ್ಟಿ, ಗುರುಲಿಂಗಯ್ಯಸ್ವಾಮಿ ಯನಗುಂಟಿ, ಶರಣಗೌಡ ಸರಡಗಿ, ರಜಾಕ್ ಮನಿಯಾರ್ ಯಡ್ರಾಮಿ, ಮಾಫಿದಶೇಟ್ ಗಿರಣಿ, ಇಮ್ರಾನ್ ಕುಕನೂರು, ರಿಯಾದ್ ಪಟೇಲ್ ಮುದವಾಳ, ಮರೆಪ್ಪ ಸರಡಗಿ ಸೇರಿದಂತೆ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ಕಪನೂರ ಕೈಗಾರಿಕಾ ಪ್ರದೇಶದಲ್ಲಿ ಅಕ್ರಮ ಯೂರಿಯಾ ಸಂಗ್ರಹ: 1,250 ಚೀಲ ವಶ



ಕಲಬುರಗಿ,ಆ.24-

ನಗರದ ಹೊರವಲಯದ ಕಪನೂರ ಕೈಗಾರಿಕಾ ಪ್ರದೇಶದಲ್ಲಿರುವ ದಾಲ್ ಮಿಲ್‌ನಲ್ಲಿ ಪರವಾನಗಿ ಇಲ್ಲದೆ ಅಕ್ರಮವಾಗಿ ಯೂರಿಯಾ ಗೊಬ್ಬರ ಸಂಗ್ರಹಿಸಿ, ಮೂಲ ಚೀಲಗಳಿಂದ ತೆಗೆದು ಬಿಳಿ ಚೀಲಗಳಿಗೆ ತುಂಬಿ ಮಿಶ್ರಣ ಮಾಡುತ್ತಿದ್ದ ಆರೋಪದ ಹಿನ್ನೆಲೆಯಲ್ಲಿ ಕೃಷಿ ಇಲಾಖೆ ಅಧಿಕಾರಿಗಳು ದಾಳಿ ನಡೆಸಿ ಸುಮಾರು 1,250 ಚೀಲ ಯೂರಿಯಾ ಗೊಬ್ಬರವನ್ನು ವಶಪಡಿಸಿಕೊಂಡಿದ್ದಾರೆ.

ಖಚಿತ ಮಾಹಿತಿ ಆಧರಿಸಿ ದಾಳಿ ನಡೆಸಿದ ಅಧಿಕಾರಿಗಳ ತಂಡ, ದಾಲ್ ಮಿಲ್‌ನಲ್ಲಿ ಅಕ್ರಮವಾಗಿ ಸಂಗ್ರಹಿಸಲಾಗಿದ್ದ ಗೊಬ್ಬರವನ್ನು ವಶಪಡಿಸಿಕೊಂಡಿದೆ. ವಶಪಡಿಸಿಕೊಂಡ ಯೂರಿಯಾದ ಅಂದಾಜು ಮೌಲ್ಯ 3.72 ಲಕ್ಷ ರೂ. ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದೂರು ಹಿನ್ನೆಲೆಯಲ್ಲಿ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದಾಗ, ದಾಲ್ ಮಿಲ್‌ನಲ್ಲಿ ಪರವಾನಗಿ ಇಲ್ಲದೆ ರಸಗೊಬ್ಬರ ಸಂಗ್ರಹಿಸಿ ಸಾಗಾಟ ಮಾಡುತ್ತಿರುವುದು ಕಂಡುಬಂದ ಹಿನ್ನೆಲೆಯಲ್ಲಿ ಕ್ರಮ ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಉಪ ಕೃಷಿ ನಿರ್ದೇಶಕ ಡಾ. ಬಾಲರಾಜ್ ರಂಗರಾವ್, ಜಾಗೃತ ದಳದ ಸಹಾಯಕ ಕೃಷಿ ನಿರ್ದೇಶಕಿ ಕವಿತಾ ಹಾಗೂ ಕೃಷಿ ಅಧಿಕಾರಿ ಜಹಾಂಗೀರ್ ಅವರನ್ನೊಳಗೊಂಡ ತಂಡ ದಾಳಿ ನಡೆಸಿತು.

ಘಟನೆಗೆ ಸಂಬಂಧಿಸಿದಂತೆ ಕೃತ್ಯದಲ್ಲಿ ಭಾಗಿಯಾಗಿರುವ ಆರೋಪಿಗಳು ಪರಾರಿಯಾಗಿದ್ದು, ಪ್ರಕರಣದ ಕುರಿತು ತನಿಖೆ ಮುಂದುವರಿದಿದೆ. ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಸಗೊಬ್ಬರ ಸಂಗ್ರಹಿಸಲು ದಾಲ್ ಮಿಲ್‌ನಲ್ಲಿ ಸ್ಥಳ ಬಾಡಿಗೆಗೆ ನೀಡಿರುವುದೂ ನಿಯಮಬಾಹಿರವಾಗಿದ್ದು, ಇದಕ್ಕೆ ಅವಕಾಶ ನೀಡಿದ ಮಿಲ್ ಮಾಲೀಕರ ವಿರುದ್ಧವೂ ಕ್ರಮ ಕೈಗೊಳ್ಳಲಾಗುವುದು ಎಂದು ಉಪ ಕೃಷಿ ನಿರ್ದೇಶಕ ಡಾ. ಬಾಲರಾಜ್ ರಂಗರಾವ್ ತಿಳಿಸಿದ್ದಾರೆ.

ಸಬ್‌ಅರ್ಬನ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದ್ದು, ಕೃಷಿ ಇಲಾಖೆ ಅಧಿಕಾರಿಗಳು ಹಾಗೂ ಪೊಲೀಸರು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಜೇವರ್ಗಿಯಲ್ಲಿ ಸಚಿವ ಅಜಯ್ ಸಿಂಗ್‌ಗೆ ಘೇರಾವ್: ಕಪ್ಪು ಬಟ್ಟೆ ಪ್ರದರ್ಶಿಸಿ ಪ್ರತಿಭಟನೆ



ಜೇವರ್ಗಿ,ಆ.24-

ರಾಜ್ಯದ ಸಣ್ಣ ನೀರಾವರಿ, ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವರಾಗಿ ಜವಾಬ್ದಾರಿ ವಹಿಸಿಕೊಂಡ ಬಳಿಕ ಮೊದಲ ಬಾರಿಗೆ ಜೇವರ್ಗಿಗೆ ಆಗಮಿಸಿದ ಸಚಿವ ಡಾ.ಅಜಯ್ ಸಿಂಗ್ ಅವರಿಗೆ ವಿವಿಧ ಪ್ರಗತಿಪರ ಸಂಘಟನೆಗಳ ಮುಖಂಡರು ಮತ್ತು ಕಾರ್ಯಕರ್ತರು ಕಪ್ಪು ಬಟ್ಟೆ ಪ್ರದರ್ಶಿಸಿ ಪ್ರತಿಭಟನೆ ನಡೆಸಿದರು.

ಪಟ್ಟಣದ ಹೊರವಲಯದ ಪ್ರವಾಸಿ ಕೇಂದ್ರದಲ್ಲಿ ಸಚಿವರು ವಿವಿಧ ಪ್ರಗತಿಪರ ಸಂಘಟನೆಗಳ ಮುಖಂಡರೊಂದಿಗೆ ಸಭೆ ನಡೆಸಿದರು. ಸಭೆಯ ಬಳಿಕ ತಮ್ಮ ಬೇಡಿಕೆಗಳಿಗೆ ಸಚಿವರು ಸ್ಪಂದಿಸಿಲ್ಲ ಎಂದು ಆರೋಪಿಸಿದ ಪ್ರತಿಭಟನಾಕಾರರು, ಸಚಿವರ ವಾಹನವನ್ನು ಘೇರಾವ್ ಹಾಕಿ ಆಕ್ರೋಶ ವ್ಯಕ್ತಪಡಿಸಿದರು. ಪೌರ ಕಾರ್ಮಿಕರು ಹಾಗೂ ರೈತರ ವಿವಿಧ ಸಮಸ್ಯೆಗಳನ್ನು ಶೀಘ್ರ ಪರಿಹರಿಸುವಂತೆ ಸಂಘಟನೆಗಳ ಮುಖಂಡರು ಒತ್ತಾಯಿಸಿದರು. ಈ ಹಿಂದೆ ನೀಡಿದ್ದ ಭರವಸೆಗಳು ಇನ್ನೂ ಈಡೇರಿಲ್ಲ ಎಂದು ಆರೋಪಿಸಿ ತಮ್ಮ ಬೇಡಿಕೆಗಳನ್ನು ಕೂಡಲೇ ಈಡೇರಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯ ವೇಳೆ ಕಪ್ಪು ಬಟ್ಟೆ ಪ್ರದರ್ಶಿಸಿದ ಕಾರ್ಯಕರ್ತರು ಸರ್ಕಾರ ಹಾಗೂ ಸ್ಥಳೀಯ ಆಡಳಿತದ ವಿರುದ್ಧ ಘೋಷಣೆಗಳನ್ನು ಕೂಗಿ ತಮ್ಮ ಅಸಮಾಧಾನ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಮಹೇಶ್ ರಾಠೋಡ್, ಇಬ್ರಾಹಿಂ ಪಟೇಲ್ ಯಾಳವಾರ, ಮಹಾಂತಗೌಡ ನಂದಿಹಳ್ಳಿ, ರಾಜಾ ಪಟೇಲ್, ಅಜೀಶ್ ಪಟೇಲ್, ಸಿದ್ದರಾಮಕಟ್ಟಿ, ಸಿದ್ದು ಕೇರೂರು, ಪುಂಡಲೀಕ್ ಗಾಯಕ್ವಾಡ್, ಬಾಬು ಪಾಟೀಲ್, ಹಬೀಬ್ ಜಾಮದಾರ್ ಶರಿಹರಿ ಕರ್ಕಳಿ ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರು ಹಾಗೂ ಕಾರ್ಯಕರ್ತರು ಪಾಲ್ಗೊಂಡಿದ್ದರು.

ಧಾರ್ಮಿಕ ಕಾರ್ಯಕ್ರಮಗಳಿಗೆ ಅಡ್ಡಿ, ಗೂಂಡಾಗಿರಿ ಸಹಿಸುವುದಿಲ್ಲ: ಸಚಿವ ಶರಣಪ್ರಕಾಶ್ ಪಾಟೀಲ್



ಜೇವರ್ಗಿ,ಆ.24-

ಜೇವರ್ಗಿ ಕ್ಷೇತ್ರದ ಜನರು ತಮ್ಮ ಕುಟುಂಬದ ಮೇಲೆ ಇಟ್ಟಿರುವ ಪ್ರೀತಿ, ವಿಶ್ವಾಸ ಹಾಗೂ ಆಶೀರ್ವಾದಕ್ಕೆ 10 ಜನ್ಮ ಎತ್ತಿದರೂ ಋಣ ತೀರಿಸಲು ಸಾಧ್ಯವಿಲ್ಲ ಎಂದು ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ.ಅಜಯ್ ಸಿಂಗ್ ಹೇಳಿದರು.

ಪಟ್ಟಣದ ಎಪಿಎಂಸಿ ಆವರಣದಲ್ಲಿ ಜೇವರ್ಗಿ ಹಾಗೂ ಯಡ್ರಾಮಿ ಬ್ಲಾಕ್ ಕಾಂಗ್ರೆಸ್ ಸಮಿತಿಗಳ ವತಿಯಿಂದ ಭಾನುವಾರ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

54 ವರ್ಷಗಳಿಂದ ಜೇವರ್ಗಿ ಕ್ಷೇತ್ರದ ಜನರು ತಮ್ಮ ಕುಟುಂಬಕ್ಕೆ ನಿರಂತರವಾಗಿ ಬೆಂಬಲ ನೀಡುತ್ತಾ ಬಂದಿದ್ದಾರೆ. ತಮ್ಮ ತಂದೆ ದಿವಂಗತ ಧರಂಸಿಂಗ್ ಅವರು ರಾಜ್ಯದ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ್ದು, ಇದೀಗ ಅವರ ಪುತ್ರನಾಗಿ ಸಚಿವನಾಗಿ ಜನರ ಸೇವೆ ಮಾಡುವ ಅವಕಾಶ ದೊರೆತಿದೆ. ಇದಕ್ಕೆ ಕ್ಷೇತ್ರದ ಜನರ ಪ್ರೀತಿ, ನಂಬಿಕೆ ಹಾಗೂ ಆಶೀರ್ವಾದವೇ ಕಾರಣ ಎಂದರು.

ಶಾಸಕರಾಗಿ ಕ್ಷೇತ್ರದಲ್ಲಿ ಹಲವು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದು, ಕೆಕೆಆರ್‌ಡಿಬಿ ಅಧ್ಯಕ್ಷರಾಗಿದ್ದ ಅವಧಿಯಲ್ಲಿಯೂ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಿದ್ದೇನೆ. ಇದೀಗ ಸಣ್ಣ ನೀರಾವರಿ ಸಚಿವನಾಗಿ ರೈತರ ಅಭಿವೃದ್ಧಿ, ಕ್ಷೇತ್ರದ ಸಮಗ್ರ ಅಭಿವೃದ್ಧಿ ಹಾಗೂ ರಾಜ್ಯದ ಪ್ರಗತಿಗೆ ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇನೆ. ಮನೆಯ ಮಗನಾಗಿ ಜನರೊಂದಿಗೆ ನಿಂತು, ತಮ್ಮ ಮೇಲಿಟ್ಟಿರುವ ವಿಶ್ವಾಸಕ್ಕೆ ತಕ್ಕಂತೆ ಕಾರ್ಯ ನಿರ್ವಹಿಸುವುದಾಗಿ ಭರವಸೆ ನೀಡಿದರು.

ಕಳೆದ ನಾಲ್ಕು ವರ್ಷಗಳಿಂದ ಕ್ಷೇತ್ರದ ಜನರು ತಮ್ಮ ಮೇಲೆ ಅಸಮಾಧಾನಗೊಂಡಿದ್ದರು. ಆದರೆ ಚುನಾವಣೆ ಸಂದರ್ಭದಲ್ಲಿ ಎಲ್ಲ ಕೋಪ, ಅಸಮಾಧಾನವನ್ನು ಮರೆತು, ಅವರೂ ನಮ್ಮವರೇ ಎಂಬ ಭಾವನೆಯಿಂದ ಮತ್ತೆ ಆಶೀರ್ವದಿಸಿ ಗೆಲ್ಲಿಸಿದ್ದಾರೆ. ಜನರ ಈ ಪ್ರೀತಿ ಮತ್ತು ವಿಶ್ವಾಸಕ್ಕೆ ತಮ್ಮ ಕುಟುಂಬ ಸದಾ ಋಣಿಯಾಗಿರುತ್ತದೆ ಎಂದು ಹೇಳಿದರು.

ನೀರಾವರಿ ಯೋಜನೆಗಳಿಗೆ ಆದ್ಯತೆ ನೀಡಿ : ಶಾಸಕ ಅಲ್ಲಮಪ್ರಭು ಪಾಟೀಲ್ ಮಾತನಾಡಿ, ಜೇವರ್ಗಿ ಕ್ಷೇತ್ರದ ಜನರ ಒಳಿತಿಗಾಗಿ ಸದಾ ಕಾಳಜಿ ವಹಿಸುವ ನಾಯಕ ಡಾ. ಅಜಯ್ ಸಿಂಗ್. ಜನರ ಆರೋಗ್ಯದ ದೃಷ್ಟಿಯಿಂದ ಉಚಿತ ಆರೋಗ್ಯ ಶಿಬಿರಗಳನ್ನು ಆಯೋಜಿಸಿ, ಇದುವರೆಗೆ ಸುಮಾರು ಒಂದು ಲಕ್ಷ ಜನರಿಗೆ ಉಚಿತ ಚಿಕಿತ್ಸೆ ದೊರೆಯುವಂತೆ ಮಾಡಿದ್ದಾರೆ ಎಂದರು.

ಕೆಕೆಆರ್‌ಡಿಬಿ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಕ್ಷೇತ್ರದಲ್ಲಿ ಹಲವು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದಾರೆ. ಇದೀಗ ಸಣ್ಣ ನೀರಾವರಿ ಸಚಿವರಾಗಿರುವ ಅವರು ಜೇವರ್ಗಿ ಹಾಗೂ ಯಡ್ರಾಮಿ ಭಾಗದ ರೈತರ ಅನುಕೂಲಕ್ಕಾಗಿ ಅಗತ್ಯ ನೀರಾವರಿ ಯೋಜನೆಗಳನ್ನು ಜಾರಿಗೆ ತಂದು ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಮನವಿ ಮಾಡಿದರು.

ಸಚಿವರಾಗಿ ಜೇವರ್ಗಿ ಕ್ಷೇತ್ರಕ್ಕೆ ಮೊದಲ ಬಾರಿಗೆ ಆಗಮಿಸಿದ ಡಾ. ಅಜಯ್ ಸಿಂಗ್ ಅವರನ್ನು ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಅದ್ದೂರಿ ಮೆರವಣಿಗೆಯ ಮೂಲಕ ಸ್ವಾಗತಿಸಿ, ಅಭಿನಂದನಾ ಸಮಾರಂಭದಲ್ಲಿ ಸನ್ಮಾನಿಸಿದರು.

ಕಾರ್ಯಕ್ರಮದಲ್ಲಿ ಜೇವರ್ಗಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿದ್ದಲಿಂಗ ರೆಡ್ಡಿ ಇಟಗಿ, ಯಡ್ರಾಮಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರುಕುಂ ಪಟೇಲ್ ಈಜೇರಿ, ಜೇಸ್ಕಾಂ ಅಧ್ಯಕ್ಷ ಪ್ರವೀಣ್ ಕುಮಾರ್ ಹರವಾಳ, ನೀಲಕಂಠರಾವ್ ಮೂಲಗೆ, ರಾಜಶೇಖರ್ ಸೀರಿ, ಕಾಶಿರಾಯಗೌಡ ಯಲಗೋಡ, ಜಿಪಂ ಮಾಜಿ ಸದಸ್ಯ ಶಾಂತಪ್ಪ ಕೂಡಲಗಿ, ಕಾಸಿಂ ಪಟೇಲ್ ಮುದವಾಳ, ಗ್ಯಾರಂಟಿ ಯೋಜನೆ ಅಧ್ಯಕ್ಷ ಶೌಕತ್ ಅಲಿ ಆಳೂರು, ಚಂದ್ರಶೇಖರ ಪುರಾಣಿಕ, ಹಯ್ಯಾಳಪ್ಪ ಗಂಗಾರ್ಕ, ಅಬ್ದುಲ್ ರಹೆಮಾನ್ ಪಟೇಲ್, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಪ್ರತಾಪ್ ಕಟ್ಟಿ, ತಿಪ್ಪಣ್ಣ ಬಳಬಟ್ಟಿ, ಗುರುಲಿಂಗಯ್ಯಸ್ವಾಮಿ ಯನಗುಂಟಿ, ಶರಣಗೌಡ ಸರಡಗಿ, ರಜಾಕ್ ಮನಿಯಾರ್ ಯಡ್ರಾಮಿ, ಮಾಫಿದಶೇಟ್ ಗಿರಣಿ, ಇಮ್ರಾನ್ ಕುಕನೂರು, ರಿಯಾದ್ ಪಟೇಲ್ ಮುದವಾಳ, ಮರೆಪ್ಪ ಸರಡಗಿ ಸೇರಿದಂತೆ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ಚಿತ್ರಕಲಾ ಕ್ಷೇತ್ರ ಆಯ್ಕೆ ಮಾಡಿಕೊಂಡು ಸಾಧನೆ ಮಾಡುತ್ತಿರುವುದು ಹೆಮ್ಮೆಯ ವಿಷಯ: ಬಸವರಾಜ ಜಾನೆ



ಕಲಬುರಗಿ,ಆ.24-

ಚಿತ್ರಕಲೆಯು ಅದ್ಭುತ ಕ್ಷೇತ್ರವಾಗಿದ್ದು, ಪ್ರತಿಯೊಬ್ಬರೂ ಪ್ರಾಮಾಣಿಕತೆ ಹಾಗೂ ಗೌರವದಿಂದ ತಮ್ಮ ಆಸಕ್ತಿಯ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡು ಬದುಕು ರೂಪಿಸಿಕೊಳ್ಳಬಹುದು ಎಂದು ಕರ್ನಾಟಕ ಲಲಿತಕಲಾ ಅಕಾಡೆಮಿ ಸದಸ್ಯ ಹಾಗೂ ಹಿರಿಯ ಚಿತ್ರಕಲಾವಿದ ಬಸವರಾಜ ಎಲ್. ಜಾನೆ ಹೇಳಿದರು.

ನಗರದ ಬಿಸಿಲು ಆರ್ಟ್ ಕಲಾ ಗ್ಯಾಲರಿಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಧನಸಹಾಯದಡಿ ಆಯೋಜಿಸಿದ್ದ ಯುವ ಚಿತ್ರಕಲಾವಿದೆ ಲಕ್ಷ್ಮೀ ಆರ್. ಪೊದ್ದಾರ ಅವರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ ಉದ್ಘಾಟಿಸಿ ಅವರು ಮಾತನಾಡಿದರು.

ಯುವ ಚಿತ್ರಕಲಾವಿದೆ ಲಕ್ಷ್ಮೀ ಆರ್. ಪೊದ್ದಾರ ಅವರು ಚಿತ್ರಕಲಾ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡು ಹಲವು ಕಲಾಕೃತಿಗಳನ್ನು ರಚಿಸಿ ಕಲಾವಿದೆಯಾಗಿ ಹೊರಹೊಮ್ಮಿರುವುದು ಹೆಮ್ಮೆಯ ಸಂಗತಿ ಎಂದರು.

ಕಲಾವಿದರು ರೂಪಭೇದ, ಪ್ರಮಾಣ, ಭಾವ, ಲಾವಣ್ಯ ಯೋಜನೆ, ಸಾದೃಶ್ಯ ಹಾಗೂ ವರ್ಣಿಕಾಭಂಗ ಎಂಬ ಆರು ಅಂಗಗಳನ್ನು ಅರಿತು ಕಲಾಕೃತಿಗಳನ್ನು ರಚಿಸಬೇಕು. ಅಚಲ ನಂಬಿಕೆ, ಕಲಾಸಕ್ತಿ ಹಾಗೂ ಸ್ಪಷ್ಟ ಗುರಿಯೊಂದಿಗೆ ಕಲಾ ಕ್ಷೇತ್ರ ಪ್ರವೇಶಿಸಿ ಭವಿಷ್ಯ ರೂಪಿಸಿಕೊಳ್ಳಲು ಹಿರಿಯರ ಮಾರ್ಗದರ್ಶನ ಅಗತ್ಯವಿದೆ ಎಂದು ಹೇಳಿದರು.

ಲಕ್ಷ್ಮೀ ಅವರ ಕಲಾಕೃತಿಗಳಲ್ಲಿ ಚಿತ್ರಾತ್ಮಕ ಸಂಯೋಜನೆ ಕಂಡು ಬರುತ್ತದೆ. ಕಲಾಕೃತಿ ರಚನೆಯಲ್ಲಿ ಕಲಾವಿದರ ಜೀವನಾನುಭವ ಪ್ರಮುಖ ಪಾತ್ರ ವಹಿಸುತ್ತದೆ ಎಂದು ಅಭಿಪ್ರಾಯಪಟ್ಟರು.

ಕೃತಿಕಾ ಸಾಂಸ್ಕೃತಿಕ ಸಂಸ್ಥೆಯ ಕಾರ್ಯದರ್ಶಿ ಮಂಜುಳಾ ಬಿ. ಜಾನೆ ಮಾತನಾಡಿ, ಇಂದಿನ ದಿನಗಳಲ್ಲಿ ಮಹಿಳಾ ಕಲಾವಿದರಿಗೆ ಸಾಕಷ್ಟು ಅವಕಾಶ ಹಾಗೂ ಪ್ರೋತ್ಸಾಹ ದೊರೆಯುತ್ತಿದೆ. ಮಹಿಳೆಯರು ತಮ್ಮ ಸ್ವಸಾಮರ್ಥ್ಯ ಮತ್ತು ಸಮರ್ಪಣಾ ಮನೋಭಾವದಿಂದ ಶ್ರೇಷ್ಠ ಕಲಾಕೃತಿಗಳನ್ನು ರಚಿಸಿ ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಗುರುತಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಸಂಗೀತ ಮತ್ತು ಲಲಿತಕಲಾ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ಶಿವಾನಂದ ಬಂಟನೂರ ಮಾತನಾಡಿ, ಲಕ್ಷ್ಮೀ ಅವರ ಕಲಾಕೃತಿಗಳಲ್ಲಿ ಹೊಸತನ ಹಾಗೂ ಬದಲಾವಣೆ ಕಾಣಬಹುದು. ನಿಸರ್ಗದಿಂದ ಪ್ರೇರಣೆ ಪಡೆದು ರಚಿಸಿರುವ ಚಿತ್ರಗಳಲ್ಲಿ ಸೌಂದರ್ಯವಿದೆ ಎಂದರು.

ಅವರ ಕಲಾಕೃತಿಗಳಲ್ಲಿ ಪ್ರಕೃತಿ ಪ್ರೇಮದ ಜೊತೆಗೆ ಪ್ರಕೃತಿಯನ್ನು ಉಳಿಸಿ ಬೆಳೆಸುವ ಸಂದೇಶವಿದೆ. ಬರಗಾಲ, ಅತಿವೃಷ್ಟಿ ಹಾಗೂ ಪರಿಸರ ನಾಶ ಸೇರಿದಂತೆ ಹಲವು ಸಮಸ್ಯೆಗಳನ್ನು ಕಲಾಕೃತಿಗಳ ಮೂಲಕ ಬಿಂಬಿಸಿದ್ದಾರೆ ಎಂದು ಹೇಳಿದರು.

ವ್ಹಿ.ಬಿ. ಬಿರಾದಾರ ಕಲಾ ಪ್ರತಿಷ್ಠಾನದ ಉಪಾಧ್ಯಕ್ಷೆ ಶೈಲಜಾ ಬಿರಾದಾರ ಅಧ್ಯಕ್ಷತೆ ವಹಿಸಿ ಮಾತನಾಡಿ, ಭಾರತೀಯ ಸಾಂಸ್ಕೃತಿಕ ಪರಂಪರೆಯಲ್ಲಿ ಚಿತ್ರಕಲೆ ಹಾಗೂ ಕಲಾವಿದರ ಕೊಡುಗೆ ಅಪಾರವಾಗಿದೆ.

ಕುಟುಂಬ ನಿರ್ವಹಣೆಯ ಜತೆಗೆ ಮಹಿಳೆಯರು ಕಲಾಕ್ಷೇತ್ರ ಪ್ರವೇಶಿಸಿ ಸಾಧನೆ ಮಾಡುತ್ತಿರುವುದು ಶ್ಲಾಘನೀಯ ಎಂದರು.

ಕಲೆಯಿಂದ ಮಾನಸಿಕ ನೆಮ್ಮದಿ, ಆರೋಗ್ಯ ಹಾಗೂ ಸೌಂದರ್ಯ ಪ್ರಜ್ಞೆ ಬೆಳೆಯುತ್ತದೆ ಎಂದು ಅವರು ಹೇಳಿದರು.

ಕಾರ್ಯಕ್ರಮದಲ್ಲಿ ಅಂಬಾರಾಯ ಚಿನಮಳ್ಳಿ, ಚಂದ್ರಹಾಸ ಜಾಲಿಹಾಳ, ಡಾ. ಪರಶುರಾಮ ಪಿ, ಡಾ. ಕೆ. ಎಂ. ಕುಮಾರಸ್ವಾಮಿ, ಕುಪೇಂದ್ರ, ಜಲಜಾಕ್ಷಿ, ಕುಲಕರ್ಣಿ, ರಾಜು ತಳವಾರ, ಗೋಪಾಲ್ ಕೆ.ಪಿ, ಮಲ್ಲಿಕಾರ್ಜುನ ಮುಗಳಿ, ಹಣಮಂತ ತಳವಾರ ಸೇರಿದಂತೆ ಮುಂತಾದವರಿದ್ದರು. ಶಿವಪ್ಪ ಎನ್. ಪೂಜಾರಿ ಅತಿಥಿ ಗಣ್ಯರನ್ನು ಸ್ವಾಗತಿಸಿ, ಕಾರ್ಯಕ್ರಮ ನಿರ್ವಹಿಸಿ ವಂದಿಸಿದರು.

ಕನ್ನಡ ನಾಡು-ನುಡಿ, ನೆಲ-ಜಲ ಪ್ರೀತಿಸುವ ಮನೋಭಾವ ಬೆಳೆಸಿಕೊಳ್ಳಿ: ಸಂತೋಷಿರಾಣಿ ಪಾಟೀಲ



ಕಲಬುರಗಿ,ಆ.24-

ಕನ್ನಡ ನಾಡು-ನುಡಿ, ನೆಲ-ಜಲವನ್ನು ಪ್ರೀತಿಸುವ ಮನೋಭಾವ ಪ್ರತಿಯೊಬ್ಬರಲ್ಲೂ ಬೆಳೆಬೇಕು. ಸಾಹಿತ್ಯ, ಕಲೆ ಹಾಗೂ ಸಂಸ್ಕೃತಿಯ ಮೂಲಕ ನಮ್ಮ ಸಾಂಸ್ಕೃತಿಕ ಬದುಕನ್ನು ಮತ್ತಷ್ಟು ಶ್ರೀಮಂತಗೊಳಿಸಬಹುದು ಎಂದು ಜಿಲ್ಲಾ ಬಿಜೆಪಿ ಗ್ರಾಮಾಂತರ ಉಪಾಧ್ಯಕ್ಷೆ ಸಂತೋಷಿರಾಣಿ ಪಾಟೀಲ ತೆಲ್ಲೂರ ಹೇಳಿದರು.

ನಗರದ ಕನ್ನಡ ಭವನದ ಸುವರ್ಣ ಸಭಾಭವನದಲ್ಲಿ ಸುವರ್ಣ ಕರ್ನಾಟಕ ಪ್ರೆಸ್ ಅಸೋಸಿಯೇಷನ್, ಕರ್ನಾಟಕ ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಆಶ್ರಯದಲ್ಲಿ ಆಯೋಜಿಸಿದ್ದ ಕಲಬುರಗಿ ಸಾಹಿತ್ಯ ಸಂಭ್ರಮ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಇಂದಿನ ಸಾಮಾಜಿಕ ಸಮಸ್ಯೆಗಳಿಗೆ ಸಾಹಿತ್ಯದ ಮೂಲಕ ಪರಿಹಾರದ ಮಾರ್ಗಗಳನ್ನು ಕಂಡುಕೊಳ್ಳಲು ಸಾಧ್ಯವಿದೆ. ಕಲೆ, ಸಾಹಿತ್ಯ ಹಾಗೂ ಸಂಸ್ಕೃತಿ ನಮ್ಮ ನೆಲದ ಹಿರಿಮೆಯನ್ನು ಪ್ರತಿಬಿಂಬಿಸುವ ಪ್ರಮುಖ ಅಂಶಗಳಾಗಿವೆ. ಜಿಲ್ಲೆಯ ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಪರಿಚಯಿಸುವ ನಿಟ್ಟಿನಲ್ಲಿ ಆಯೋಜಿಸಿರುವ ಕಲಬುರಗಿ ಸಾಹಿತ್ಯ ಸಂಭ್ರಮ ಹೊಸ ಸ್ಫೂರ್ತಿ ನೀಡಿದೆ ಎಂದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ವಿಜಯಕುಮಾರ ಪಾಟೀಲ ತೇಗಲತಿಪ್ಪಿ ಮಾತನಾಡಿ, ಕನ್ನಡ ನಾಡು-ನುಡಿ ಹಾಗೂ ಸಂಸ್ಕೃತಿಯ ಬೆಳವಣಿಗೆಯೊಂದಿಗೆ ಹೊಸ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸಲು ಇಂತಹ ಸಾಹಿತ್ಯ ಸಂಭ್ರಮಗಳು ಅಗತ್ಯವಾಗಿವೆ. ಕನ್ನಡ ಭಾಷೆ ಮತ್ತು ಸಾಹಿತ್ಯದ ಉಳಿವಿನಲ್ಲಿ ಕಲಬುರಗಿ ಜಿಲ್ಲೆಯ ಬರಹಗಾರರ ಕೊಡುಗೆ ಮಹತ್ವದ್ದಾಗಿದೆ. ಕನ್ನಡ ಸಾಹಿತ್ಯ ಪರಿಷತ್ತು ಜನಪರ ಕಾರ್ಯಕ್ರಮಗಳನ್ನು ರೂಪಿಸುವ ಮೂಲಕ ಸಾಮಾಜಿಕ ನ್ಯಾಯದ ಆಶಯದೊಂದಿಗೆ ಮುನ್ನಡೆಯುತ್ತಿದೆ ಎಂದರು.

ಸಂಶೋಧಕ ಮುಡುಬಿ ಗುಂಡೇರಾವ ಉಪನ್ಯಾಸ ನೀಡಿ, ಕಲಬುರಗಿ ನೆಲದ ಇತಿಹಾಸ ಮತ್ತು ಸಾಂಸ್ಕೃತಿಕ ಪರಂಪರೆ ಇಡೀ ವಿಶ್ವಕ್ಕೆ ಮಾದರಿಯಾಗಿದೆ. ಕನ್ನಡದ ಕೀರ್ತಿ ಹೆಚ್ಚಿಸಿದ ರಾಷ್ಟ್ರಕೂಟರು ಹಾಗೂ ಚಾಲುಕ್ಯರ ವೈಭವವನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಅಗತ್ಯವಿದೆ ಎಂದು ಹೇಳಿದರು.

ಕನ್ನಡದ ಪ್ರಥಮ ಕೃತಿ ಕವಿರಾಜಮಾರ್ಗ ರಚನೆಯಾದ ಈ ಪುಣ್ಯಭೂಮಿ ಕನ್ನಡಿಗರ ಅಸ್ಮಿತೆಯ ಪ್ರತೀಕವಾಗಿದೆ. ಕಲಬುರಗಿ ನೆಲವು ಕನ್ನಡ ಸಂಸ್ಕೃತಿಗೆ ಮಹತ್ವದ ಕೊಡುಗೆ ನೀಡಿದ್ದು, ಅದರ ಪರಂಪರೆಯನ್ನು ಉಳಿಸಿ ಬೆಳೆಸುವ ಜವಾಬ್ದಾರಿ ಪ್ರತಿಯೊಬ್ಬ ಕನ್ನಡಿಗನ ಮೇಲಿದೆ ಎಂದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನದ ಅಧ್ಯಕ್ಷೆ ಡಾ. ಮಂಜುಳಾ ಪಾವಗಡ, ವಿಜಯಪುರದ ಮಕ್ಕಳ ಸಾಹಿತಿ ಪಂಡಿತ್ ಅವಜಿ, ಹಿರಿಯ ಸಾಹಿತಿ ಡಾ. ಸಿದ್ದಣ್ಣ ಬಾಡಗಿ, ಧನಲಕ್ಷ್ಮೀ, ಶಿವರಾಜ ಅಂಡಗಿ, ಡಾ. ಡಿ. ಪೂಜಾರಿ ಹುಂಡೇಕಲ್, ಭಾಗ್ಯಶ್ರೀ ಬಾಬಣ್ಣ, ನಬಿ ರಸೂಲ್, ಧರ್ಮಣ್ಣ ಎಚ್. ಧನ್ನಿ, ಶರಣರಾಜ ಛಪ್ಪರಬಂದಿ, ಸಿದ್ದಪ್ಪ ತಳ್ಳಳ್ಳಿ ಹಾಗೂ ಸಿದ್ದು ಬಾನರ್ ಸೇರಿದಂತೆ ಹಲವು ಸಾಹಿತಿಗಳು ಮಾತನಾಡಿದರು.

ಇದೇ ಸಂದರ್ಭದಲ್ಲಿ ಲೇಖಕರಾದ ಧನಲಕ್ಷ್ಮೀ ಹಾಗೂ ಶರಣಗೌಡ ಪಾಟೀಲ ಅವರ ಕಣಗಿಲೆ ಕೃತಿಗಳನ್ನು ಬಿಡುಗಡೆಗೊಳಿಸಲಾಯಿತು.

ಒಂದನೇಯ ಪುಟದಿಂದ

ರಾಯಚೂರಿನಲ್ಲಿ 3.21 ಲಕ್ಷ ಮತದಾರರ ಹೆಸರು ಡಿಲೀಟ್

ಅವಧಿಯೊಳಗೆ ಅರ್ಜಿ ಸಲ್ಲಿಸಬೇಕು ಎಂದು ಜಿಲ್ಲಾಧಿಕಾರಿ ಪೂವಿತಾ ಎಸ್. ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಸಹಾಯಕ ಆಯುಕ್ತ ಡಾ. ಹಂಪಣ್ಣ ಸಜ್ಜನ್, ಜಿಲ್ಲಾಧಿಕಾರಿ ಕಚೇರಿಯ ಚುನಾವಣಾ ಶಾಖೆಯ ಶಿರಸ್ತೇದಾರ ಋಶಿಕೇಶಿ ಸೇರಿದಂತೆ ಅಧಿಕಾರಿಗಳು ಉಪಸ್ಥಿತರಿದ್ದರು.

ಅವಧೂತ ವಿನಯ ಗುರೂಜಿ ಹುಟ್ಟುಹಬ್ಬ ಆಚರಣೆ

ಎಂದು ಹಾರೈಸಿದರು.

ಭಕ್ತರು ಗುರೂಜಿ ಅವರಿಗೆ ಶುಭಾಶಯಗಳನ್ನು ಸಲ್ಲಿಸಿ, ಅವರ ಆಶೀರ್ವಾದ ಪಡೆದುಕೊಂಡರು. ಈ ಸಂದರ್ಭದಲ್ಲಿ ಶಾಲೆಯ ಮಕ್ಕಳು ಹಾಗೂ ಭಕ್ತರ ಉಪಸ್ಥಿತಿಯಿಂದ ಕಾರ್ಯಕ್ರಮವು ಸಂಭ್ರಮದ ವಾತಾವರಣದಲ್ಲಿ ನಡೆಯಿತು.

ಕ್ಷೇತ್ರದ ಕರಡು ಮತದಾರರ ಪಟ್ಟಿ ಪ್ರಕಟ ಸುರೇಶ ವರ್ಮಾ

ಪ್ರಕಟಿಸಲಾಗಿದೆ. ಪಟ್ಟಿಯಲ್ಲಿ ಹೆಸರು ಬಿಟ್ಟುಹೋಗಿದ್ದರೆ ಅಥವಾ ಯಾವುದೇ ಆಕ್ಷೇಪಣೆಗಳಿದ್ದರೆ ಸೆಪ್ಟೆಂಬರ್ 23ರಿಂದ ಅಕ್ಟೋಬರ್ 22, 2026ರವರೆಗೆ ಸಂಬಂಧಪಟ್ಟ ಕಚೇರಿಗಳಲ್ಲಿ ಅರ್ಜಿ ಅಥವಾ ಆಕ್ಷೇಪಣೆ ಸಲ್ಲಿಸಬಹುದು ಎಂದು ತಹಶೀಲ್ದಾರ್ ತಿಳಿಸಿದರು.

ರಾಯಚೂರು ತಹಶೀಲ್ದಾರ್ ಕಚೇರಿ ಹಾಗೂ ಮಹಾನಗರ ಪಾಲಿಕೆ ಕಚೇರಿಯಲ್ಲಿ ಆಕ್ಷೇಪಣೆಗಳನ್ನು ಸಲ್ಲಿಸಲು ಅವಕಾಶವಿದೆ. ಅಕ್ಟೋಬರ್ 1, 2026ಕ್ಕೆ 18 ವರ್ಷ ಪೂರ್ಣಗೊಳ್ಳುವವರು ನಮೂನೆ6 ಮೂಲಕ ಮತದಾರರ ಪಟ್ಟಿಗೆ ಹೊಸದಾಗಿ ಹೆಸರು ಸೇರ್ಪಡೆ ಮಾಡಿಕೊಳ್ಳಬಹುದು. ಹೆಸರು, ತಂದೆಯ ಹೆಸರು, ಗಂಡನ ಹೆಸರು ಸೇರಿದಂತೆ ವಿವರಗಳಲ್ಲಿ ತಪ್ಪುಗಳಿದ್ದರೆ ನಿಗದಿತ ನಮೂನೆ ಮೂಲಕ ತಿದ್ದುಪಡಿಗೂ ಅವಕಾಶ ಕಲ್ಪಿಸಲಾಗಿದೆ ಎಂದರು.

ಡ್ರಾಪ್ ಲಿಸ್ಟ್‌ನಲ್ಲಿರುವವರು ಅಥವಾ ಬೇರೆಡೆಗೆ ಸ್ಥಳಾಂತರಗೊಂಡಿರುವವರು ನಮೂನೆ8 ಮೂಲಕ ಅಗತ್ಯ ಬದಲಾವಣೆ ಮಾಡಿಕೊಳ್ಳಲು ಅಥವಾ ತಮ್ಮ ಹೆಸರು ಉಳಿಸಿಕೊಳ್ಳಲು ಅರ್ಜಿ ಸಲ್ಲಿಸಬಹುದು ಎಂದು ಹೇಳಿದರು.

ಸಾರ್ವಜನಿಕರಿಂದ ಸ್ವೀಕರಿಸುವ ಆಕ್ಷೇಪಣೆಗಳು, ಅರ್ಜಿಗಳು ಹಾಗೂ ಹಿಯರಿಂಗ್ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಅಕ್ಟೋಬರ್ 27, 2026ರಂದು ಅಂತಿಮ ಪರಿಷ್ಕೃತ ಮತದಾರರ ಪಟ್ಟಿ ಪ್ರಕಟಿಸಲಾಗುವುದು ಎಂದು ಸುರೇಶ ವರ್ಮಾ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ರಾಯಚೂರು ಮಹಾನಗರ ಪಾಲಿಕೆಯ ಆಡಳಿತ ವಿಭಾಗದ ಉಪ ಆಯುಕ್ತ ಶರಣಪ್ಪ ಸತ್ಯಪೇಟ್ ಸೇರಿದಂತೆ ತಹಶೀಲ್ದಾರ್ ಕಚೇರಿ ಹಾಗೂ ಮಹಾನಗರ ಪಾಲಿಕೆಯ ಚುನಾವಣಾ ಶಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

★ಕರ್ನಾಟಕ ಸರ್ಕಾರದ ಅಧಿಕೃತ ಮಾಹಿತಿಯಲ್ಲಿಯೂ ರಾಯಚೂರು ತಹಶೀಲ್ದಾರ್ ಆಗಿ ಸುರೇಶ್ ವರ್ಮಾ ಅವರ ವಿವರ ಲಭ್ಯವಿದೆ. ★

ಪೋಲಿಸ್ ಠಾಣೆಯಲ್ಲಿ ಈದ್ ಮಿಲಾದ್ ಶಾಂತಿಸಭೆ. ಶಾಂತಿ ಸೌಹಾರ್ದತೆಯಿಂದ ಹಬ್ಬ ಆಚರಿಸಿ - ಚಂದ್ರಶೇಖರ್ ನಾಯಕ

ಸಾಗುವ ರಸ್ತೆಗಳಲ್ಲಿ ಸಂಚಾರಿಗಳಿಗೆ ಅಡಚಣೆಯಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು. ಸಾರ್ವಜನಿಕರಿಗೆ ತೊಂದರೆಯಾಗದಂತೆ ಸ್ವಯಂ ಸೇವಕರನ್ನು ನಿಯೋಜಿಸಬೇಕು. ಧ್ವನಿವರ್ಧಕಗಳ ಬಳಕೆಯಲ್ಲಿ ನಿಯಮ ಪಾಲಿಸಬೇಕು. ಸಮಾಜದ ಹಿರಿಯರು ಯುವಕರ ಮೇಲೆ ಹೆಚ್ಚಿನ ನಿಗಾ ವಹಿಸಬೇಕು ಎಂದರು.

ಈ ಸಂದರ್ಭದಲ್ಲಿ ಸಿಪಿಐ ಶಶಿಕಾಂತ.ಎಂ, ಪ್ರೊಬೇಷನರಿ ಪಿಎಸ್ ಐ ಹನುಮಂತ್ರಾಯ, ಎಎಸ್ಐ ಬಸನಗೌಡ, ಮುಸ್ಲಿಂ ಸಮಾಜದ ಧರ್ಮಗುರುಗಳಾದ ಖಾಜಿ ಮಂಜೂರು ಅಲಿ , ಖಾಜಿ ನವಾಜ್, ಹಸೇನ ಅಲಿ ಸಾಬ್, ಮಹ್ಮದ್ ಹುಸೇನ,ಬಷೀರ ಸಾಬ್, ಅಜ್ಮೀರ ಸೈಕಲ್, ಎಂ.ಡಿ.ವಲಿ ಗುತ್ತೆದಾರ, ಇಬ್ರಾಹಿಂ ಸೈಕಲ್ ಸತ್ತರಸಾಬ್, ಲಂಕೇಶ, ಹುಲ್ಲಿಗೇಪ್ಪ ಮಡಿವಾಳ ಮುಖಂಡರು ಇದ್ದರು.

40 ಸರ್ಕಾರಿ ಶಾಲೆಗಳ ಮಕ್ಕಳಿಗೆ ಶೈಕ್ಷಣಿಕ ಸಾಮಗ್ರಿ ವಿತರಣೆ ಆರ್.ಕೆ. ಫೌಂಡೇಶನ್, ದಾನಿಗಳ ಸೇವೆಗೆ ಮೆಚ್ಚುಗೆ

ಮಾಡುತ್ತಿರುವುದು ಅಭಿನಂದನಾರ್ಹ ಎಂದರು.

ಮಹಾಂತೇಶ ಬಿರಾದಾರ ಮಾತನಾಡಿ, ಮಕ್ಕಳಿಗಾಗಿ ಮಾಡುವ ಸೇವೆಯಲ್ಲಿ ದೇವರನ್ನು ಕಾಣಬೇಕು. ದಾನಿಗಳ ವಿಶ್ವಾಸವೇ ನಮ್ಮ ಶಕ್ತಿ; ಅವರು ನೀಡುವ ನೆರವು ಸರಿಯಾದ ಮಕ್ಕಳಿಗೆ ತಲುಪಿಸುವುದು ನಮ್ಮ ಜವಾಬ್ದಾರಿ ಎಂದರು.

ಆರ್.ಕೆ. ಫೌಂಡೇಶನ್ ಪ್ರತಿಬಾರಿಯೂ ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ವಿವಿಧ ರೀತಿಯಲ್ಲಿ ಸಹಕಾರ ನೀಡುತ್ತಿದೆ. ಡಾ. ಸಂದೀಪ ಪಾಟೀಲ, ಡಾ. ಮಂಚುಕೊಂಡ, ಮೆಡಿಶೆಟ್ಟಿ ಕುಟುಂಬದವರು, ಕೃಷ್ಣಾಜಿ ಕುಲಕರ್ಣಿ ಸೇರಿದಂತೆ ದಾನಿಗಳ ಸಹಕಾರಕ್ಕೆ ಕೃತಜ್ಞತೆ ಸಲ್ಲಿಸಿದ ಅವರು, ಮುಂದಿನ ದಿನಗಳಲ್ಲಿಯೂ ಇನ್ನಷ್ಟು ಸರ್ಕಾರಿ ಶಾಲೆಗಳಿಗೆ ನೆರವು ನೀಡುವ ಕಾರ್ಯ ಮುಂದುವರಿಸಲಾಗುವುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಬುಡದಿನ್ನಿಯ ಶ್ರೀಕಾಂತ ಕಿರಿಯ ಸ್ವಾಮೀಜಿ, ಸಂಘಟಕ ಮಹಾಂತೇಶ ಬಿರಾದಾರ, ಮಾರುತಿ, ಕೃಷ್ಣಾಜಿ, ಮಾರೆಪ್ಪ, ವೀರೇಶ, ಭೀಮಾನಾಯಕ, ಗೀತಾರಾಣಿ, ವಿದ್ಯಾವತಿ, ಧನಲಕ್ಷ್ಮೀ, ಶಾಹೀನ್ ಫಾತೀಮಾ, ಹನಮಂತಪ್ಪ, ಸಂತೋಷ ಮರೆಣ್ಣ ಸೇರಿದಂತೆ ತಾಲೂಕಿನ ನೂರಾರು ಶಿಕ್ಷಕರು ಉಪಸ್ಥಿತರಿದ್ದರು.

ಕನಿಷ್ಠ ವೇತನ ತಡೆಗೆ ಆಕ್ರೋಶ: ಸೆ. 2ರಿಂದ ಬೆಂಗಳೂರಿನಲ್ಲಿ ವಸತಿ ನಿಲಯ ಕಾರ್ಮಿಕರ ಅಹೋರಾತ್ರಿ ಧರಣಿ

ವಲಯದಲ್ಲಿ ತೀವ್ರ ಆತಂಕ ಹಾಗೂ ಆಕ್ರೋಶಕ್ಕೆ ಕಾರಣವಾಗಿದೆ. ಸರ್ಕಾರದ ಈ ನಿರ್ಧಾರವನ್ನು ಖಂಡಿಸಿ ರಾಜ್ಯಾದ್ಯಂತ ಕಾರ್ಮಿಕರು ಹೋರಾಟಕ್ಕೆ ಧುಮುಕುತ್ತಿದ್ದಾರೆ.

ಈ ರಾಜ್ಯಮಟ್ಟದ ಅಹೋರಾತ್ರಿ ಧರಣಿಯಲ್ಲಿ ತಾಲೂಕಿನ ಬಹುತೇಕ ವಸತಿ ನಿಲಯಗಳ ಕಾರ್ಮಿಕರು ಭಾಗವಹಿಸುತ್ತಿದ್ದಾರೆ. ಹೀಗಾಗಿ ಪ್ರತಿಭಟನೆಯ ದಿನಗಳಲ್ಲಿ ವಸತಿ ನಿಲಯಗಳಲ್ಲಿ ಮೆನು ಚಾರ್ಟ್ ಪ್ರಕಾರ ಅಡುಗೆ ಹಾಗೂ ಇತರ ದಿನನಿತ್ಯದ ಕೆಲಸ ಕಾರ್ಯಗಳನ್ನು ಪೂರ್ಣಪ್ರಮಾಣದಲ್ಲಿ ನಿರ್ವಹಿಸಲು ಸಾಧ್ಯವಾಗುವುದಿಲ್ಲ. ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಅಗತ್ಯ ಸೇವೆಗಳಿಗೆ ಕನಿಷ್ಠ ಸಂಖ್ಯೆಯ ಸಿಬ್ಬಂದಿಯನ್ನು ಮಾತ್ರ ಕರ್ತವ್ಯದಲ್ಲಿರಿಸಿ, ಉಳಿದವರು ಹೋರಾಟದಲ್ಲಿ ಪಾಲ್ಗೊಳ್ಳಲಿದ್ದಾರೆ. ಆದ್ದರಿಂದ ಇಲಾಖಾ ಅಧಿಕಾರಿಗಳು ಕಾರ್ಮಿಕರ ಈ ನ್ಯಾಯಯುತ ಹೋರಾಟಕ್ಕೆ ಸೂಕ್ತ ಸಹಕಾರ ನೀಡಬೇಕೆಂದು ಸಂಘಟನೆ ಮನವಿ ಮಾಡಲಾಗಿತ್ತು.

ಈ ಸಂದರ್ಭದಲ್ಲಿ ಪ್ರಧಾನ ಕಾರ್ಯದರ್ಶಿ ಸುಂದರ ರಾಜ್, ಪ್ರಮುಖರಾದ ಹುಸೇನಪ್ಪ, ಅಶೋಕಮ್ಮ, ಅಂಬರೀಶ್, ಮಾಂತೇಶ್ ಹಾಗೂ ಅಡುಗೆ ಸಿಬ್ಬಂದಿಯಾದ ಶಿವಮ್ಮ, ದೇವಮ್ಮ, ರೇಣುಕಮ್ಮ ಸೇರಿದಂತೆ ಹಲವು ಸಿಬ್ಬಂದಿಗಳು ಉಪಸ್ಥಿತರಿದ್ದರು.

ಸಚಿವ ಬಿ.ನಾಗೇಂದ್ರ ರಾಜೀನಾಮೆಗೆ ಆಗ್ರಹಿಸಿ ಅಹೋರಾತ್ರಿ ಧರಣಿಗೆ ಮುಂದಾದ ಪ್ರತಿಪಕ್ಷಗಳು

ಸಭಾಧ್ಯಕ್ಷರ ಪೀಠದ ಮುಂದಿನ ಬಾವಿಗಿಳಿದು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಲು ಆರಂಭಿಸಿದರು.

ಈ ಹಂತದಲ್ಲಿ ಮಾತನಾಡಿದ ಅಬಕಾರಿ ಸಚಿವ ಶಿವಲಿಂಗೇಗೌಡ, ಸಾವಿರಾರು ಜನರು ಆರೋಪಗಳನ್ನು ಎದುರಿಸುತ್ತಿದ್ದಾರೆ. ಆರೋಪ ಮಾಡಿದ ತಕ್ಷಣ ಯಾರೂ ಅಪರಾಧಿಯಾಗುವುದಿಲ್ಲ. ದೇಶದಲ್ಲಿ ಆರೋಪ ಎದುರಿಸುತ್ತಿರುವ ಸಚಿವರು 150 ಮಂದಿ ಇದ್ದಾರೆ. ನೀವು ಚೆನ್ನಾಗಿ ಅಭ್ಯಾಸ ಮಾಡಿಕೊಂಡು ಬಂದು ಕೂಗುತ್ತಿದ್ದೀರಿ ಎಂದು ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು.

ಆಡಳಿತ ಮತ್ತು ಪ್ರತಿಪಕ್ಷಗಳ ಆರೋಪ-ಪ್ರತ್ಯಾರೋಪ, ಗದ್ದಲದ ನಡುವೆ ಸಭಾಧ್ಯಕ್ಷರು ಅಧಿಕೃತ ಕಾರ್ಯಕಲಾಪಗಳನ್ನು ಕೈಗೆತ್ತಿಕೊಂಡು ವರದಿಗಳನ್ನು ಮಂಡಿಸಲು ಅವಕಾಶ ನೀಡಿದರು. ಬಳಿಕ ಪ್ರಶ್ನೋತ್ತರ ಕಲಾಪಕ್ಕೆ ಅನುವು ಮಾಡಿಕೊಟ್ಟರು. ಪ್ರತಿಪಕ್ಷಗಳ ಧರಣಿ ಹಾಗೂ ಗದ್ದಲದ ನಡುವೆಯೇ ಪ್ರಶ್ನೋತ್ತರ ಕಲಾಪ ನಡೆಯಿತು.

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

ಅರ್ಹ ಮತದಾರರು ಪಟ್ಟಿಯಿಂದ ಹೊರಗುಳಿಯದಂತೆ ಎಚ್ಚರ ವಹಿಸಿ: ಶಾಸಕ ಪ್ರಭು ಚವ್ಹಾಣ್



ಔರಾದ್,ಆ.24-

ಎಸ್‌ಐಆರ್ ಪ್ರಕ್ರಿಯೆಯ ಮೊದಲ ಹಂತ ಪೂರ್ಣಗೊಂಡಿದ್ದು, ಶೀಘ್ರದಲ್ಲೇ ಕರಡು ಮತದಾರರ ಪಟ್ಟಿ ಪ್ರಕಟವಾಗಲಿದೆ. ಈ ಹಿನ್ನೆಲೆಯಲ್ಲಿ ಅರ್ಹ ನಾಗರಿಕರು ಮತದಾರರ ಪಟ್ಟಿಯಿಂದ ಹೊರಗುಳಿಯದಂತೆ ಕಾರ್ಯಕರ್ತರು ಎಚ್ಚರಿಕೆಯಿಂದ ಕಾರ್ಯನಿರ್ವಹಿಸಬೇಕು ಎಂದು ಶಾಸಕ ಪ್ರಭು ಚವ್ಹಾಣ್ ಹೇಳಿದರು.

ಪಟ್ಟಣದ ಸಾಯಿ ಕಲ್ಯಾಣ ಮಂಟಪದಲ್ಲಿ ಭಾರತೀಯ ಜನತಾ ಪಕ್ಷದ ವತಿಯಿಂದ ಭಾನುವಾರ ಆಯೋಜಿಸಿದ್ದ ಬಿಎಲ್‌ಎ-2 ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಎಸ್‌ಐಆರ್‌ನ ಮೊದಲ ಹಂತ ಪೂರ್ಣಗೊಂಡಿದ್ದು, ಇದೀಗ ಕರಡು ಮತದಾರರ ಪಟ್ಟಿ ಪ್ರಕಟವಾಗಲಿದೆ. ಬಿಎಲ್‌ಎ-2ಗಳು ತಮ್ಮ ವ್ಯಾಪ್ತಿಯ ಮತದಾರರ ಮಾಹಿತಿಯನ್ನು ಪರಿಶೀಲಿಸಿ, ಅರ್ಹ ಮತದಾರರ ಹೆಸರುಗಳು ಕರಡು ಪಟ್ಟಿಯಲ್ಲಿ ಇರುವುದನ್ನು ಖಚಿತಪಡಿಸಿಕೊಳ್ಳಬೇಕು ಎಂದು ಸೂಚಿಸಿದರು.

ಮತದಾನ ಕೇವಲ ಹಕ್ಕಲ್ಲ, ದೇಶದ ಭವಿಷ್ಯವನ್ನು ರೂಪಿಸುವ ಜವಾಬ್ದಾರಿಯೂ ಆಗಿದೆ. ಪ್ರತಿಯೊಂದು ಮತವೂ ಜನಪ್ರತಿನಿಧಿಗಳ ಆಯ್ಕೆಯಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಹೀಗಾಗಿ ಅರ್ಹ ಪ್ರತಿಯೊಬ್ಬ ನಾಗರಿಕರು ಮತದಾರರ ಪಟ್ಟಿಯಲ್ಲಿ ಇರುವಂತೆ ಜಾಗೃತಿ ಮೂಡಿಸುವುದು ಕಾರ್ಯಕರ್ತರ ಪ್ರಮುಖ ಕರ್ತವ್ಯವಾಗಿದೆ ಎಂದರು.

ಯಾವುದೇ ಅರ್ಹ ಮತದಾರರ ಹೆಸರು ಪಟ್ಟಿಯಿಂದ ಕೈಬಿಟ್ಟದ್ದರೆ, ನಿಯಮಾನುಸಾರ ಅಗತ್ಯ ಅರ್ಜಿ ಅಥವಾ ಆಕ್ಷೇಪಣೆ ಸಲ್ಲಿಸಿ ಹೆಸರು ಸೇರ್ಪಡೆಗೆ ಸಹಕರಿಸಬೇಕು. ಯಾವುದೇ ಅರ್ಹ ಮತದಾರರು ಮತ ದಾನದ ಹಕ್ಕಿನಿಂದ ವಂಚಿತರಾಗದಂತೆ ನೋಡಿಕೊಳ್ಳುವುದು ಎಲ್ಲರ ಜವಾಬ್ದಾರಿಯಾಗಿದೆ ಎಂದು ಹೇಳಿದರು.

ಎಸ್‌ಐಆರ್ ಪ್ರಕ್ರಿಯೆಯ ಭಾಗವಾಗಿ ಎನ್ಯೂಮರೇಷನ್ ಅರ್ಜಿಗಳನ್ನು ಮನೆ ಮನೆಗೆ ತಲುಪಿಸಿ ಭರ್ತಿ ಮಾಡಿಸಿ ಸಲ್ಲಿಸುವಲ್ಲಿ ಪಕ್ಷದ ಕಾರ್ಯಕರ್ತರು ಸಲ್ಲಿಸಿರುವ ಸೇವೆ ಶ್ಲಾಘನೀಯ. ಮುಂದೆಯೂ ಮನೆ ಮನೆಗೆ ತೆರಳಿ ಮತದಾರರ ಪಟ್ಟಿಯ ಪರಿಶೀಲನೆ ಹಾಗೂ ಅಗತ್ಯ ತಿದ್ದುಪಡಿ ಕುರಿತು ಜನರಲ್ಲಿ ಜಾಗೃತಿ ಮೂಡಿಸಬೇಕು ಎಂದು ಕರೆ ನೀಡಿದರು.

ಹೊರ ಜಿಲ್ಲೆಗಳಿಗೆ ತೆರಳಿರುವ ಮತದಾರರ ಮೇಲೂ ನಿಗಾ : ಔರಾದ್ ಕ್ಷೇತ್ರದ ಅನೇಕರು ಉದ್ಯೋಗಕ್ಕಾಗಿ ಮುಂಬೈ, ಪುಣೆ, ಉದಗೀರ್ ಲಾತೂರ್ ಹಾಗೂ ಹೈದರಾಬಾದ್ ಸೇರಿದಂತೆ ವಿವಿಧ ನಗರಗಳಿಗೆ ತೆರಳಿದ್ದಾರೆ. ಎಸ್‌ಐರ್ಆ ಕುರಿತು ಮಾಹಿತಿ ಇಲ್ಲದಿರುವುದರಿಂದ ಅಂತಹ ಕೆಲವರು ಮತದಾರರ ಪಟ್ಟಿಯಿಂದ ಹೊರಗುಳಿಯುವ ಸಾಧ್ಯತೆಯಿದೆ. ಆದ್ದರಿಂದ ಅವರನ್ನು ಗುರುತಿಸಿ ಮತದಾರರ ಪಟ್ಟಿಯಲ್ಲಿ ಹೆಸರು ಉಳಿಸಿಕೊಳ್ಳಲು ಅಥವಾ ಸೇರ್ಪಡೆಗೊಳಿಸಲು ಅಗತ್ಯ ಸಹಕಾರ ನೀಡಬೇಕು ಎಂದು ಪ್ರಭು ಚವ್ಹಾಣ ಹೇಳಿದರು.

ಕರಡು ಮತದಾರರ ಪಟ್ಟಿಯಲ್ಲಿ ಹೆಸರು ಇಲ್ಲದಿದ್ದರೆ, ಅಗತ್ಯಕ್ಕೆ ಅನುಗುಣವಾಗಿ ಸಂಬಂಧಪಟ್ಟ ನಮೂನೆಗಳನ್ನು ಸಲ್ಲಿಸಿ ಹೆಸರು ಸೇರ್ಪಡೆ, ಆಕ್ಷೇಪಣೆ ಅಥವಾ ತಿದ್ದುಪಡಿಗೆ ಕ್ರಮ ಕೈಗೊಳ್ಳುವಂತೆ ಸಾರ್ವಜನಿಕರಿಗೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಸೋಮನಾಥ್ ಪಾಟೀಲ್, ಮಂಡಲ ಅಧ್ಯಕ್ಷ ರಾಮಶೆಟ್ಟಿ ಪನ್ನಾಳೆ, ಪ್ರಶಿಕ್ಷಣ ಪ್ರಕೋಷ್ಟದ ರಾಜ್ಯ ಸಂಚಾಲಕ ರಾಜಶೇಖರ್ ನಾಗಮೂರ್ತಿ, ಪಕ್ಷದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪೀರಪ್ಪ ಔರಾದೆ, ಉಪಾಧ್ಯಕ್ಷ ಅರಹಂತ್ ಸಾವಳೆ, ಬಾಬುರಾವ್ ಕಾರಬಾರಿ, ಚಂದ್ರಶೇಖರ್ ಪಾಟೀಲ, ವಸಂತ್ ಬಿರಾದಾರ್, ಧೊಂಡಿಬಾ ನರೋಟೆ, ರಂಗರಾವ್ ಜಾಧವ್, ಶಿವಾನಂದ್ ವಡ್ಡೆ, ನಿಲೇಶ್, ಶಿವರಾಜ್ ಅಲ್ಮಾಜೆ, ಖಂಡೋಬಾ ಕಂಗಟೆ, ಪ್ರಕಾಶ್ ಅಲ್ಮಾಜೆ, ಬಾಬುರಾವ್ ವಾಡಿ, ಪ್ರವೀಣ್ ಕಾರಬಾರಿ, ಸಾಗರ್ ಪಾಟೀಲ್, ಶಿವಕುಮಾರ್ ಪಾಂಚಾಳ್, ರಾಜಶೇಖರ್ ಶೆಳ್ಕೆ, ಗಣೇಶ್ ಕಾರೆಗಾವೆ, ಮಲ್ಲಪ್ಪ ದಾನಾ, ಅಶೋಕ್ ಅಲ್ಮಾಜೆ, ಯೋಗೇಶ್ ಪಾಟೀಲ್, ಬಂಟಿ ರಾಂಪೂರೆ, ಉದಯ್ ಸೋಲಾಪೂರೆ, ಪ್ರಕಾಶ್ ಜೀರ್ಗೆ, ರಾಜಕುಮಾರ್ ಸೋರಾಳೆ ಹಾಗೂ ಸಂಜು ಮುರ್ಕೆ ಸೇರಿದಂತೆ ಅನೇಕ ಕಾರ್ಯಕರ್ತರು ಉಪಸ್ಥಿತರಿದ್ದರು.

ಖರ್ಗೆ ಭಾಷಣ ಮಾಡಿದ ಸ್ಥಳ ಶುದ್ಧೀಕರಣ ಖಂಡಿಸಿ ಕಾಂಗ್ರೆಸ್‌ನಿಂದ ಪ್ರತಿಭಟನೆ



ಹುಮನಾಬಾದ್,ಆ.24-

ಎಐಸಿಸಿ ಅಧ್ಯಕ್ಷ ಹಾಗೂ ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಉತ್ತರಾಖಂಡದ ಹಲ್ದವಾನಿಯ ರಾಮಲೀಲಾ ಮೈದಾನದಲ್ಲಿ ಆ.8ರಂದು ಭಾಷಣ ಮಾಡಿದ ಸ್ಥಳವನ್ನು ಆ.10ರಂದು ಹವನದ ಮೂಲಕ ಶುದ್ಧೀಕರಣ ಮಾಡಿರುವ ಘಟನೆ ಖಂಡಿಸಿ ಮಾಜಿ ಸಚಿವ ರಾಜಶೇಖರ್ ಪಾಟೀಲ್ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷದಿಂದ ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಯಿತು.

ನಗರದ ಹಳೆ ತಹಸೀಲ್ದಾರ್ ಕಚೇರಿಯಿಂದ ಆರಂಭವಾದ ಪ್ರತಿಭಟನಾ ರ್‍ಯಾಲಿಯು ಮುಖ್ಯ ರಸ್ತೆಯ ಮೂಲಕ ಡಾ. ಬಿ.ಆರ್. ಅಂಬೇಡ್ಕರ್ ವೃತ್ತದವರೆಗೆ ನಡೆಯಿತು. ನೂರಾರು ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಭಾಗವಹಿಸಿ ಘೋಷಣೆಗಳನ್ನು ಕೂಗಿದರು.

ಪ್ರತಿಭಟನೆಯಲ್ಲಿ ಮಾತನಾಡಿದ ಮಾಜಿ ಸಚಿವ ರಾಜಶೇಖರ್ ಪಾಟೀಲ್, 2014ರಲ್ಲಿ ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಇಂತಹ ಘಟನೆಗಳು ಹೆಚ್ಚಾಗಿ ಬೆಳಕಿಗೆ ಬರುತ್ತಿವೆ ಎಂದು ಆರೋಪಿಸಿದರು.

ಮಲ್ಲಿಕಾರ್ಜುನ ಖರ್ಗೆ ಅವರು ತಮ್ಮ ಇಡೀ ಜೀವನವನ್ನು ದೇಶಕ್ಕಾಗಿ ಮುಡಿಪಾಗಿಟ್ಟಿದ್ದಾರೆ. ಕಾರ್ಮಿಕ ಸಚಿವರಾಗಿದ್ದ ಸಂದರ್ಭದಲ್ಲಿ ಕಾರ್ಮಿಕರ ಪರವಾಗಿ ಸಚಿವರು ಏನು ಮಾಡಬಹುದು ಎಂಬುದನ್ನು ತೋರಿಸಿಕೊಟ್ಟ ನಾಯಕ ಖರ್ಗೆ. ಇಂತಹ ಹಿರಿಯ ನಾಯಕನ ವಿರುದ್ಧ ಅವಮಾನಕರ ಕೃತ್ಯ ಎಸಗಿರುವುದು ಅತ್ಯಂತ ಖಂಡನೀಯ ಎಂದು ಆಕ್ರೋಶ ವ್ಯಕ್ತಪಡಿಸಿದರು. ಚುನಾವಣೆ ಸಂದರ್ಭದಲ್ಲಿ ಪಾಕಿಸ್ತಾನ, ಜಮ್ಮು-ಕಾಶ್ಮೀರದಂತಹ ವಿಷಯಗಳನ್ನು ಪ್ರಸ್ತಾಪಿಸಿ ಜನರ ಗಮನವನ್ನು ಬೇರೆಡೆ ಸೆಳೆಯುವ ಬಿಜೆಪಿ, ಅಧಿಕಾರಕ್ಕೆ ಬಂದ ಬಳಿಕ ಇಂತಹ ಕಿಡಿಗೇಡಿಗಳಿಗೆ ಆಸ್ಪದ ನೀಡುತ್ತಿದೆ ಎಂದು ಆರೋಪಿಸಿದರು.

ಈ ಘಟನೆ ಖರ್ಗೆ ಅವರಿಗಷ್ಟೇ ಅಲ್ಲ, ದೇಶದ 140 ಕೋಟಿ ಜನರಿಗೆ ಮಾಡಿದ ಅವಮಾನವಾಗಿದೆ. ಕೃತ್ಯದಲ್ಲಿ ಭಾಗಿಯಾದವರನ್ನು ಬಂಧಿಸಿ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ರಾಜಶೇಖರ್ ಪಾಟೀಲ್ ಒತ್ತಾಯಿಸಿದರು.

ನಂತರದಲ್ಲಿ ತಹಸೀಲ್ದಾರ್ ಅವರ ಮೂಲಕ ರಾಜ್ಯಪಾಲರಿಗೆ ಮನವಿ ಪತ್ರ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯ ಡಾ. ಚಂದ್ರಶೇಖರ್ ಪಾಟೀಲ್, ಮಾಜಿ ವಿಧಾನ ಪರಿಷತ್ ಸದಸ್ಯ ಅರವಿಂದ್ ಅರಳಿ, ಕಾಂಗ್ರೆಸ್ ಸಹಕಾರ ವಿಭಾಗದ ರಾಜ್ಯಾಧ್ಯಕ್ಷ ಧನರಾಜ್ ತಾಳಂಪಳ್ಳಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಫ್ಸರ್ ಮೋಹಿಯೋದ್ದಿನ್, ಮಾಜಿ ತಾಲ್ಲೂಕು ಪಂಚಾಯತ್ ಅಧ್ಯಕ್ಷ ರಮೇಶ್ ಡಾಕುಳಗಿ, ಯುವ ಕಾಂಗ್ರೆಸ್ ಅಧ್ಯಕ್ಷ ಉಮೇಶ್ ಜಮಗಿ, ಗ್ರಾಮೀಣ ಅಧ್ಯಕ್ಷ ಓಂಕಾರ್ ತುಂಬಾ, ಪ್ರಮುಖರಾದ ಲಕ್ಷ್ಮಿಪುತ್ರ ಮಾಳಗೆ, ವಿಜಯಕುಮಾರ್ ನಾತೆ, ಮಲ್ಲಿಕಾರ್ಜುನ್ ಮಹಿಂದ್ರಕುಮಾರ್ ಹಾಗೂ ವೀರಪ್ಪ ಧೂಮ್ಮನ್ಸೂರ್ ಸೇರಿದಂತೆ ನೂರಾರು ಕಾಂಗ್ರೆಸ್ ಕಾರ್ಯಕರ್ತರು ಉಪಸ್ಥಿತರಿದ್ದರು.



ಚಿತ್ರಕಲೆ ವಿದ್ಯಾರ್ಥಿಗಳಲ್ಲಿ ಸೃಜನಶೀಲತೆ, ಆತ್ಮವಿಶ್ವಾಸ ಬೆಳೆಸುತ್ತದೆ: ಸುರೇಖಾ ಮರುರಕರ್

ಬೀದರ್,ಆ.24-

ಚಿತ್ರಕಲೆ ವಿದ್ಯಾರ್ಥಿಗಳಲ್ಲಿ ಗಮನ, ತಾಳ್ಮೆ, ಸೃಜನಶೀಲತೆ ಹಾಗೂ ಆತ್ಮವಿಶ್ವಾಸವನ್ನು ಬೆಳೆಸುತ್ತದೆ. ಪ್ರತಿಯೊಬ್ಬ ವಿದ್ಯಾರ್ಥಿಯಲ್ಲೂ ಒಬ್ಬ ಕಲಾವಿದನಿದ್ದು, ಆ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವುದು ಎಲ್ಲರ ಜವಾಬ್ದಾರಿಯಾಗಿದೆ ಎಂದು ಡಾ. ಎಸ್.ಎಂ. ಪಂಡಿತ ಚಿತ್ರಕಲಾ ಮಹಾವಿದ್ಯಾಲಯದ ಪ್ರಾಂಶುಪಾಲೆ ಸುರೇಖಾ ಮರುರಕರ್ ಹೇಳಿದರು.

ನಗರದ ಕರ್ನಾಟಕ ಸಾಹಿತ್ಯ ಸಂಘದಲ್ಲಿ ರಾಜಕುಮಾರ್ ಹೆಬ್ಬಾಳ್ಕರ್ ಅವರ ನೇತೃತ್ವದಲ್ಲಿ ಶುಕ್ರವಾರ ಆಯೋಜಿಸಿದ್ದ ಸರ್ದಾರ ವಲ್ಲಭಭಾಯಿ ಪಟೇಲ್ ಅವರ 150ನೇ ಜನ್ಮಶತಮಾನೋತ್ಸವ ಹಾಗೂ ಚಿತ್ರಕಲಾ ಸ್ಪರ್ಧೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಚಿತ್ರಕಲೆ ಭಾವನೆ, ಕಲ್ಪನೆ, ಆಲೋಚನೆ ಹಾಗೂ ಸೃಜನಶೀಲತೆಯನ್ನು ವ್ಯಕ್ತಪಡಿಸುವ ಸುಂದರ ಭಾಷೆಯಾಗಿದೆ ಎಂದರು.

ಮಾತಿನಲ್ಲಿ ಹೇಳಲಾಗದ ಹಲವು ಭಾವನೆಗಳನ್ನು ಚಿತ್ರಗಳ ಮೂಲಕ ಪರಿಣಾಮಕಾರಿಯಾಗಿ ವ್ಯಕ್ತಪಡಿಸಬಹುದು. ಪ್ರಕೃತಿ, ಸಂಸ್ಕೃತಿ, ಇತಿಹಾಸ ಹಾಗೂ ಸಾಮಾಜಿಕ ಬದುಕನ್ನು ಚಿತ್ರಕಲೆಯ ಮೂಲಕ ಪರಿಚಯಿಸಬಹುದು ಎಂದು ಹೇಳಿದರು.

ವಿದ್ಯಾರ್ಥಿಗಳಲ್ಲಿರುವ ಕಲಾ ಪ್ರತಿಭೆ ಹಾಗೂ ಸೃಜನಶೀಲತೆಯನ್ನು ಪ್ರೋತ್ಸಾಹಿಸುವ ಇಂತಹ ಕಾರ್ಯಕ್ರಮಗಳು ಅವರ ಆತ್ಮವಿಶ್ವಾಸ ಹೆಚ್ಚಿಸಲು ಸಹಕಾರಿಯಾಗುತ್ತವೆ ಎಂದು ಅಭಿಪ್ರಾಯಪಟ್ಟರು.

ಚಿತ್ರಕಲಾ ಸ್ಪರ್ಧೆಯಲ್ಲಿ ಶಂಕರ್ ಕಾಂಬ್ಳೆ, ಓಂಕಾರ್ ಮೇತ್ರೆ, ಸಂಜುಕುಮಾರ್ ಬಂಡೆ, ಶಿವಕುಮಾರ್ ಮೇತ್ರೆ, ಸಂತೋಷ್ ಸಂಗುಳಗಿ, ರಾಜಕುಮಾರ್ ಮೇತ್ರೆ, ಮಲ್ಲಿಕಾರ್ಜುನ್ ಮರಗುಂಡಾ, ಗುರುನಾಥ್, ವಿಜಯಶ್ರೀ ಕುದರೆ, ಪ್ರತೀಕ್ ಹುಬಾಳೆ, ಭಾರತ್ ಬಂಡೆ ಹಾಗೂ ಜಾಸುವ ಸೇರಿದಂತೆ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಸ್ಪರ್ಧೆಯಲ್ಲಿ ಪಾಲ್ಗೊಂಡ ಎಲ್ಲ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ನೀಡಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಚಂದ್ರಕಾಂತ್ ದರ್ಗಾ, ಸಂಜುಕುಮಾರ್ ಬಂಡೆ, ರಾಜಕುಮಾರ್ ಹೆಬ್ಬಾಳ್ಕರ್ ಸೇರಿದಂತೆ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಬಿಜೆಪಿಯಲ್ಲಿರುವ 226 ಸಚಿವ, ಶಾಸಕರ ಮೇಲೆ ಆರೋಪಗಳಿವೆ; ಅವರು ರಾಜೀನಾಮೆ ಕೊಡ್ತಾರಾ: ಡಾ. ಅಜಯ್ ಸಿಂಗ್ ಪ್ರಶ್ನೆ

ಕಲಬುರಗಿ,ಆ.24-

ಬಿಜೆಪಿಯಲ್ಲಿರುವ 226 ಕೇಂದ್ರ ಸಚಿವರು ಹಾಗೂ ಶಾಸಕರ ವಿರುದ್ಧ ಆರೋಪಗಳಿವೆ. ಪಶ್ಚಿಮ ಬಂಗಾಳದ ಸಿಎಂ ಸುವೇಂದು ಅಧಿಕಾರಿ ಹಾಗೂ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಅವರು ಮೊದಲು ರಾಜೀನಾಮೆ ನೀಡಲಿ, ಬಳಿಕ ನಮ್ಮ ಸಚಿವರ ರಾಜೀನಾಮೆ ಕುರಿತು ಮಾತನಾಡಲಿ ಎಂದು ರಾಜ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ. ಅಜಯ್ ಸಿಂಗ್ ಬಿಜೆಪಿಗೆ ತಿರುಗೇಟು ನೀಡಿದ್ದಾರೆ

ನಗರದ ಕೆಕೆಆರ್‌ಡಿಬಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ವಾಲ್ಮೀಕಿ ನಿಗಮದ ಹಗರಣದ ಆರೋಪ ಎದುರಿಸುತ್ತಿರುವ ಸಚಿವ ಬಿ. ನಾಗೇಂದ್ರ ಅವರ ರಾಜೀನಾಮೆಗೆ ಬಿಜೆಪಿ ಒತ್ತಾಯಿಸಿರುವ ಕುರಿತು ಪ್ರತಿಕ್ರಿಯೆ ನೀಡಿದ ಅವರು, ''ಅವರಿಗೊಂದು ನೀತಿ, ನಮಗೊಂದು ನೀತಿಯೇ?'' ಎಂದು ಪ್ರಶ್ನಿಸಿದರು.

ಸಚಿವ ಬಿ. ನಾಗೇಂದ್ರ ವಿರುದ್ಧ



ಕೇಳಿಬಂದಿರುವ 87 ಕೋಟಿ ರೂ. ಅಕ್ರಮದ ಆರೋಪಕ್ಕೆ ಸಂಬಂಧಿಸಿದಂತೆ ಹಣ ಸಂಪೂರ್ಣ ವಾಪಸ್ ಬಂದಿದೆ. ಈ ಕುರಿತು ಸ್ಪಷ್ಟನೆಯನ್ನೂ ನೀಡಲಾಗಿದೆ. ತಪ್ಪಿತಸ್ಥರು ಎಂದು ಸಾಬೀತಾಗಿಲ್ಲದಿರುವಾಗ ರಾಜೀನಾಮೆ ಕೇಳುವುದು ಏಕೆ? ಎಂದು ಪ್ರಶ್ನಿಸಿದ ಅಜಯ್ ಸಿಂಗ್, ತಪ್ಪಿತಸ್ಥರು ಎಂದು ಸಾಬೀತಾದರೆ ಸರ್ಕಾರ ಕ್ರಮ ಕೈಗೊಳ್ಳಲಿದೆ. ಬಿಜೆಪಿಯವರಿಗೆ ಬೇರೆ ಕೆಲಸವಿಲ್ಲದೆ ಈ ವಿಚಾರವನ್ನು ರಾಜಕೀಯಗೊಳಿಸುತ್ತಿದ್ದಾರೆ ಎಂದು ಆರೋಪಿಸಿದರು.

''ಬಿಜೆಪಿಗರಿಂದ ದೇಶಪ್ರೇಮ ಕಲಿಯುವ ಅಗತ್ಯ ಕಾಂಗ್ರೆಸ್‌ಗೆ ಇಲ್ಲ. ನಮ್ಮ ಪಕ್ಷ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದೆ. ಬಿಜೆಪಿಯಲ್ಲಿ ಯಾರಾದರೂ ಸ್ವಾತಂತ್ರ್ಯ ಹೋರಾಟಗಾರರು ಇದ್ದಾರೆಯೇ?'' ಎಂದು ಪ್ರಶ್ನಿಸಿದ ಅವರು, 1937ರಲ್ಲೇ ಕಾಂಗ್ರೆಸ್ ವಂದೇ ಮಾತರಂ ಗೀತೆಯ ಎರಡು ಪ್ಯಾರಾಗಳನ್ನು ಹಾಡುವ ಕುರಿತು ನಿರ್ಧಾರ ಕೈಗೊಂಡಿತ್ತು. ಇದೀಗ ಈ ವಿಚಾರವನ್ನೂ ಬಿಜೆಪಿ ರಾಜಕೀಯಕ್ಕೆ ಬಳಸಿಕೊಳ್ಳುತ್ತಿದೆ ಎಂದು ಟೀಕಿಸಿದರು. ನಿರುದ್ಯೋಗ ಸಮಸ್ಯೆ ಉಲ್ಬಣಗೊಳ್ಳುತ್ತಿದೆ. ಇದನ್ನು ಮರೆಮಾಚಲು, ಒಂದು ದೇಶ ಒಂದು ಚುನಾವಣೆ ಹಾಗೂ ಡಿಲಿಮಿಟೇಷನ್‌ನಂತಹ ವಿಚಾರಗಳತ್ತ ಜನರ ಗಮನವನ್ನು ಸೆಳೆಯಲು ಬಿಜೆಪಿ ಪ್ರಯತ್ನಿಸುತ್ತಿದೆ. ಇಂದಿನ ಯುವಕರಿಗೆ ಉದ್ಯೋಗ ಸಿಗದಿರುವ ಬಗ್ಗೆ ಕೇಂದ್ರ ಸರ್ಕಾರ ಗಂಭೀರವಾಗಿ ಚಿಂತಿಸುತ್ತಿಲ್ಲ. 2014ರಲ್ಲಿ ಅಧಿಕಾರಕ್ಕೆ ಬಂದಾಗ ಪ್ರಧಾನಿ ನರೇಂದ್ರ ಮೋದಿ ಅವರು ವರ್ಷಕ್ಕೆ ಎರಡು ಕೋಟಿ ಉದ್ಯೋಗ ಸೃಷ್ಟಿಸುವುದಾಗಿ ಭರವಸೆ ನೀಡಿದ್ದರು. ಆ ಭರವಸೆ ಈಡೇರಿಸಿದ್ದರೆ ಇಂದು ನಿರುದ್ಯೋಗದ ಪರಿಸ್ಥಿತಿ ಇಷ್ಟೊಂದು ಗಂಭೀರವಾಗಿರುತ್ತಿರಲಿಲ್ಲ ಎಂದರು.

ಯುವಜನರು ಆಕ್ರೋಶಗೊಂಡಿರುವ ಹಿನ್ನೆಲೆಯಲ್ಲಿ ಕೇಂದ್ರ ಶಿಕ್ಷಣ ಸಚಿವರು ರಾಜೀನಾಮೆ ನೀಡಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಆದರೆ ಉದ್ಯೋಗ ಸೃಷ್ಟಿಗೆ ಕೇಂದ್ರ ಸರ್ಕಾರ ಯಾವುದೇ ಅಗತ್ಯ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಅಜಯ್ ಸಿಂಗ್ ದೂರಿದರು.

ರೈತರಿಗೆ ರಾಷ್ಟ್ರಮಟ್ಟದಲ್ಲಿ ಸಾಲಮನ್ನಾ ಮಾಡುವಂತೆ ಕಾಂಗ್ರೆಸ್ ಒತ್ತಾಯಿಸುತ್ತಿದ್ದರೂ ಕೇಂದ್ರ ಸರ್ಕಾರ, ಬಿಜೆಪಿಗರು ಈ ಬಗ್ಗೆ ಮಾತನಾಡುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ತನಿಖಾ ವರದಿ ಸಿಎಂ ಬಳಿಯಿದೆ: ಕೆಕೆಆರ್‌ಡಿಬಿ ಹಾಗೂ ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಮತ್ತು ಸಾಂಸ್ಕೃತಿಕ ಸಂಘಕ್ಕೆ ಸಂಬಂಧಿಸಿದ ಹಗರಣಗಳ ತನಿಖಾ ವರದಿ ಕುರಿತು ಪ್ರತಿಕ್ರಿಯಿಸಿದ ಸಚಿವರು, ತನಿಖಾ ವರದಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಬಳಿಯಿದೆ. ಈ ಕುರಿತು ಅಂತಿಮ ತೀರ್ಮಾನವನ್ನು ಮುಖ್ಯಮಂತ್ರಿಗಳೇ ಕೈಗೊಳ್ಳಲಿದ್ದಾರೆ ಎಂದರು. ಮಲ್ಲಾಬಾದ್ ಏತ ನೀರಾವರಿ ಯೋಜನೆಗೆ ಭೇಟಿ: ಜೇವರ್ಗಿ ಹಾಗೂ ಯಡ್ರಾಮಿ ತಾಲೂಕಿನ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಮಲ್ಲಾಬಾದ್ ಏತ ನೀರಾವರಿ ಯೋಜನೆಯ ಕಾಮಗಾರಿಯಲ್ಲಿ ಕಳಪೆ ಗುಣಮಟ್ಟದ ಆರೋಪಗಳ ಕುರಿತು ಮಾತನಾಡಿದ ಅಜಯ್ ಸಿಂಗ್, ಇದು ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾಗಿದೆ.

ನಿಮ್ಮೂರು ಸುದ್ದಿ

ಸಂಪಾದಕೀಯ



ಶಾಸನಗಳ ರಚನೆಯಲ್ಲಿ ಪ್ರಬುದ್ಧತೆಯ ಅಗತ್ಯ

ದಿಲ್ಲಿಯ ಪಿಆರ್‌ಎಸ್ ಲೆಜಿಸ್ಲೇಟಿವ್ ರಿಸರ್ಚ್ (ಪಿಆರ್‌ಎಸ್) ಸಂಸ್ಥೆಯು ವಿವಾದಾತ್ಮಕ ರೀತಿಯಲ್ಲಿ ಆಗಸ್ಟ್ 13ಕ್ಕೆ ಕೊನೆಗೊಂಡ ದೇಶದ ಸಂಸತ್ತಿನ ಮುಂಗಾರು ಅಧಿವೇಶನದ ಕಾರ್ಯಕಲಾಪದ ದಕ್ಷತೆಯ ಬಗ್ಗೆ ವರದಿಯನ್ನು ಹೊರತಂದಿದೆ. ಅದರ ಪ್ರಕಾರ ಸಂಸತ್ತಿನಲ್ಲಿ ಮಂಡಿಸಲಾದ 11 ಮಸೂದೆಗಳಲ್ಲಿ 9 ಯಾವುದೇ ಚರ್ಚೆಯಿಲ್ಲದೆ ಅಂಗೀಕಾರವಾದವು. ನ್ಯಾಯ ಮಂಡಳಿಗಳಿಗೆ ನೇಮಕಾತಿ, ಕೇರಳ ರಾಜ್ಯದ ಮರುನಾಮಕರಣ, ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮ, ವಿದೇಶಿ ದೇಣಿಗೆಯ ನಿಯಂತ್ರಣ ಕಾನೂನು ತಿದ್ದುಪಡಿ, ಗಣಿ ಮತ್ತು ಖನಿಜಗಳ ಕಾಯ್ದೆಯ ತಿದ್ದುಪಡಿ, ಎಂಎಸ್‌ಎಂಇ-ಹೀಗೆ ಕೆಲವು ಮಹತ್ವಪೂರ್ಣ ವಿಷಯಗಳ ಬಗ್ಗೆ ಮಸೂದೆಗಳನ್ನು ಸಂಸತ್ತಿನಲ್ಲಿ ಮಂಡಿಸಲಾಗಿತ್ತು.

ವಿರೋಧ ಪಕ್ಷಗಳ ಪ್ರತಿಭಟನೆಗಳಿಂದ ಮತ್ತು ಅಸಹಕಾರದಿಂದ ಸಂಸತ್ತಿನ ಅಮೂಲ್ಯವಾದ ಸಮಯ ವ್ಯರ್ಥವಾಯಿತು ಎಂಬ ಕಾರಣವನ್ನು ನೀಡಿದ ಸರಕಾರವು, ಅಗತ್ಯದ ಶಾಸನಗಳನ್ನು ಚರ್ಚೆಗಳಿಲ್ಲದೆ ಅಂಗೀಕರಿಸಬೇಕಾಯಿತು ಎಂದು ಹೇಳಿಕೊಂಡಿದೆ. ಆದರೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಜನತೆಯ ಮೇಲೆ ಪ್ರಭಾವ ಬೀರಬಲ್ಲ ಕಾನೂನುಗಳನ್ನು ರೂಪಿಸುವ ಮೊದಲು ಜನಪ್ರತಿನಿಧಿಗಳ ಮಟ್ಟದಲ್ಲಿ ಮುಕ್ತ ಚರ್ಚೆಯು ಅಗತ್ಯ. ಚರ್ಚೆಯು ಸುಗಮವಾಗುವಂತೆ ಮತ್ತು ಅದಕ್ಕೆ ಬೇಕಾದ ಕಾಲಾವಕಾಶ ದೊರಕುವಂತೆ ಮಾಡುವ ಜವಾಬ್ದಾರಿ ಆಳುವ ಪಕ್ಷದ ಮೇಲಿದೆ.

ಶಾಸನಗಳನ್ನು ರಚಿಸುವುದು ಸಂಸತ್ತಿನ ಮುಖ್ಯವಾದ ಒಂದು ಕಾರ್ಯ. ಪ್ರಜಾಪ್ರಭುತ್ವದಲ್ಲಿ ಶಾಸನಗಳನ್ನು ರಚಿಸುವಾಗ ವಿಭಿನ್ನ ಹಿತಾಸಕ್ತಿಗಳ ಅಭಿಪ್ರಾಯಗಳನ್ನು ಅರಿತುಕೊಂಡು ಅವುಗಳಿಗೆ ಸ್ಪಂದಿಸಿ ಮಸೂದೆಯನ್ನು ಸೂಕ್ತವಾಗಿ ಪರಿಷ್ಕರಿಸುವುದು ಅತೀ ಅಗತ್ಯ. ಇದು ಸಾಧ್ಯವಾಗುವುದು ಸಂಸತ್ತಿನ ಸದನಗಳಲ್ಲಿ ಆಗುವ ಚರ್ಚೆಗಳ ಮೂಲಕ.

ಸಂಸತ್ತಿನಲ್ಲಿ ಮಸೂದೆಗಳು ಹೇಗೆ ಮಂಡನೆಯಾಗುತ್ತವೆ ಮತ್ತು ಯಾವ ಕ್ರಮದಲ್ಲಿ ಚರ್ಚೆಯಾಗಿ ಕೊನೆಗೆ ಅನುಮೋದನೆಯಾಗುತ್ತವೆ ಎಂಬುದರ ಬಗ್ಗೆ ಸರಳವಾದ ಮಾಹಿತಿಯು ಇಲ್ಲಿ ಪ್ರಸ್ತುತವಾಗುತ್ತದೆ. ಯಾವುದೇ ಹೊಸ ಕಾನೂನನ್ನು ತರುವ ಅಥವಾ ಊರ್ಜಿತದಲ್ಲಿರುವ ಒಂದು ಶಾಸನವನ್ನು ತಿದ್ದುಪಡಿಮಾಡುವ ಅಧಿಕಾರವು ಆ ವಿಷಯಕ್ಕೆ ಸಂಬಂಧಪಟ್ಟ ಕೇಂದ್ರ ಮಂತ್ರಿಗಳದ್ದು. ಅವರ ವಿಭಾಗವು ಕರಡು ರೂಪದಲ್ಲಿ ಮಸೂದೆಯನ್ನು ಸಿದ್ಧಪಡಿಸುತ್ತದೆ. ಕರಡು ಮಸೂದೆಯನ್ನು ಕಾನೂನು ಮಂತ್ರಾಲಯದ ಪರಿಶೀಲನೆಯ ಬಳಿಕ ಮಂತ್ರಿಗಳು ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಸಭಾಧ್ಯಕ್ಷರ ಅನುಮತಿ ಪಡೆದು ಮಂಡಿಸುತ್ತಾರೆ. ತದನಂತರ ಮಸೂದೆಯು ವಿಸ್ತೃತವಾದ ಚರ್ಚೆಗೆ ಒಳಗಾಗುತ್ತದೆ. ಗಂಭೀರ ಮತ್ತು ಕ್ಲಿಷ್ಟ ವಿಷಯವಾದರೆ ಮಸೂದೆಯನ್ನು ಸಂಸತ್ತಿನ ನಿರ್ಣಯದ ಮೂಲಕ ಒಂದು ಸಂಸದೀಯ ಸಮಿತಿಯ ಪರಿಶೀಲನೆಗೆ ಒಪ್ಪಿಸಲಾಗುತ್ತದೆ. ಆ ನಿರ್ಧಾರವು ಸಂಸತ್ತಿನದ್ದು ಆದರೂ ಅದರ ಬಗ್ಗೆ ಸರಕಾರವೇ ಮುತುವರ್ಜಿ ವಹಿಸಬೇಕಾಗುತ್ತದೆ. ಸದನದಲ್ಲಿ ಶಾಸಕರು ಒತ್ತಾಯ ಮಾಡಿದ ಸನ್ನಿವೇಶದಲ್ಲಿಯೂ ಸಮಿತಿಯನ್ನು ರಚಿಸಬಹುದು. ಸಂಸದೀಯ ಸಮಿತಿಯಲ್ಲಿ ಆಳುವ ಮತ್ತು ವಿರೋಧ ಪಕ್ಷಗಳ ಸದಸ್ಯರು ಅವುಗಳ ಬಲಾಬಲಕ್ಕೆ ಅನುಗುಣವಾಗಿ ಸದಸ್ಯರನ್ನು ಹೊಂದಿರುತ್ತಾರೆ.

ಮಸೂದೆಯ ಪರಿಶೀಲನೆಯ ಸಂದರ್ಭದಲ್ಲಿ ಸಮಿತಿಯು ಬೇರೆ ಬೇರೆ ತಜ್ಞರ ಅಭಿಪ್ರಾಯಗಳನ್ನು ಸ್ವೀಕರಿಸುವ ವ್ಯವಸ್ಥೆಯಿದೆ. ಆಸಕ್ತ ವರ್ಗದ ಸಾರ್ವಜನಿಕರೂ ತಮ್ಮ ಅಭಿಪ್ರಾಯವನ್ನು ಸಮಿತಿಗೆ ಲಿಖಿತವಾಗಿ ಅಥವಾ ಮೌಖಿಕವಾಗಿ ಸಲ್ಲಿಸಬಹುದು. ಇವುಗಳನ್ನೆಲ್ಲ ಪರಿಶೀಲಿಸಿ ಕರಡು ಮಸೂದೆಯಲ್ಲಿ ಅಗತ್ಯವಿದ್ದ ಬದಲಾವಣೆಗಳನ್ನು ಮಾಡಿ ಅದನ್ನು ಸಂಸತ್ತಿನಲ್ಲಿ ಪುನಃ ಮಂಡಿಸಿ ಮತ್ತೆ ಚರ್ಚೆಯಾಗಿ ಸಂಸತ್ತು ಒಪ್ಪಿಗೆಯನ್ನು ನೀಡುವ ಪದ್ಧತಿ ಸಾಮಾನ್ಯವಾಗಿ ರೂಢಿಯಲ್ಲಿದೆ.

ಪ್ರಮುಖ ಮಸೂದೆಗಳನ್ನು ಸದನದಲ್ಲಿ ಕ್ಯಾಬಿನೆಟ್ ಮಂತ್ರಿಗಳೇ ಮಂಡಿಸುವುದು ಪ್ರಜಾತಂತ್ರದ ಸಂಪ್ರದಾಯ. ಅದು ಸರಕಾರವು ಸಂಸತ್ತಿಗೆ ಸೂಚಿಸುವ ಗೌರವದ ಸಂಕೇತ. ಅಷ್ಟು ಮಾತ್ರವಲ್ಲ, ಮಸೂದೆಯು ಚರ್ಚೆಯಾಗುವ ಸಂದರ್ಭದಲ್ಲಿ ಸಂಬಂಧ ಪಟ್ಟ ಮಂತ್ರಿಗಳು ಹಾಜರಿದ್ದು ಸದಸ್ಯರ ಅಭಿಪ್ರಾಯಗಳನ್ನು ಗ್ರಹಿಸಿ ಅವುಗಳಿಗೆ ಸ್ಪಂದಿಸಬೇಕು. ಎಲ್ಲರ ಅಭಿಪ್ರಾಯಗಳನ್ನು ಸರಕಾರ ಒಪ್ಪಬೇಕಿಲ್ಲ. ಆದರೆ ಚರ್ಚೆಯು ಅತೀ ಅಗತ್ಯ.

ಸಂಸತ್ತಿನಲ್ಲಿ ಮುಕ್ತ ಚರ್ಚೆಯಾದಾಗ ವಿಭಿನ್ನ ಅಭಿಪ್ರಾಯಗಳು ಮುನ್ನೆಲೆಗೆ ಬರುತ್ತವೆ; ಹೊಸ ಕಾನೂನಿನ ಗುಣಾವಗುಣಗಳ ವಿಶ್ಲೇಷಣೆಗೆ ಅವಕಾಶ ಇದೆ. ಮುಂದೆ ಬರಬಹುದಾದ ತೊಡಕುಗಳ ಕುರಿತೂ ಸಂಸದರು ಬೆಳಕು ಚೆಲ್ಲುವ ಸಾಧ್ಯತೆಯಿದೆ. ಒಟ್ಟಿನಲ್ಲಿ ಮುಕ್ತ ಚರ್ಚೆಯಿಂದ ದೇಶದ ಶಾಸನಗಳ ಗುಣಮಟ್ಟ ಹೆಚ್ಚುತ್ತದೆ. ಅವುಗಳು ಜನಪ್ರತಿನಿಧಿಗಳ ಸಂಪೂರ್ಣ ಸಮ್ಮತಿಯಿಂದ ಅಂಗೀಕಾರವಾದರೆ ಆ ರೀತಿಯ ಒಮ್ಮತಾಭಿಪ್ರಾಯವು ಪ್ರಜಾತಂತ್ರವನ್ನು ಬಲಗೊಳಿಸುತ್ತದೆ. ಮುಕ್ತ ಚರ್ಚೆಯ ಮೂಲಕ ಶಾಸನಗಳನ್ನು ರಚಿಸುವುದು ಪ್ರಬುದ್ಧ ಪ್ರಜಾಸತ್ತೆಯ ಸಂಕೇತ. ಹಿಂದಿನ ಅನೇಕ ಅಧಿವೇಶನಗಳಲ್ಲಿ ಆಗುತ್ತಿದ್ದಂತೆ ಈ ಬಾರಿಯ ಮುಂಗಾರು ಅಧಿವೇಶನದಲ್ಲಿಯೂ ಮಸೂದೆಗಳನ್ನು ಮಂಡಿಸುವ ಸಂದರ್ಭದಲ್ಲಿ ಸಂಬಂಧಪಟ್ಟ ಹಿರಿಯ ಮಂತ್ರಿಗಳು ಉಪಸ್ಥಿತರಿರಲಿಲ್ಲ. ಚರ್ಚೆಗಳೂ ಆಗಲಿಲ್ಲ. ಮಾತ್ರವಲ್ಲ, ಅತ್ಯಂತ ಕಡಿಮೆ ಅವಧಿಯಲ್ಲಿ-ಕೆಲವೊಮ್ಮೆ 10-15 ನಿಮಿಷಗಳಲ್ಲಿ ಮಸೂದೆಗಳು ವಿರೋಧಪಕ್ಷಗಳ ಆಕ್ಷೇಪವನ್ನು ಕಡೆಗಣಿಸಿ ಧ್ವನಿಮತದಿಂದ ಅಂಗೀಕಾರಗೊಂಡವು.

ವಿಪಕ್ಷಗಳ ಆಕ್ಷೇಪಗಳು ಬಂದಾಗ ಸಂಸತ್ತಿನ ಕಲಾಪಗಳು ಸುಗಮವಾಗುವಂತೆ ಮಾಡುವ ಹೊಣೆಗಾರಿಕೆ ಆಡಳಿತಪಕ್ಷದ್ದು. ಪ್ರತಿಪಕ್ಷಗಳು ಸಂಸತ್ತಿನ ಕಲಾಪಕ್ಕೆ ತಡೆಯನ್ನು ಒಡ್ಡುತ್ತಿದ್ದಾಗ ಅವರ ವರ್ತನೆಯ ಮೂಲವನ್ನು ಅರಿತು ಅದಕ್ಕೆ ಪರಿಹಾರವನ್ನು ಕಂಡುಕೊಳ್ಳುವ ವ್ಯವಧಾನವನ್ನು ಮಂತ್ರಿಗಳು ಹೊಂದಿರಬೇಕು. ವಿಪರ್ಯಾಸವೆಂದರೆ ಆಳುವ ಪಕ್ಷದವರೇ ಈ ಬಾರಿ ಸಂಸತ್ತಿನ ಹೊರಗೆ ಭಿತ್ತಿಪತ್ರಗಳನ್ನು ಹಿಡಿದು ಪ್ರತಿಪಕ್ಷಗಳ ವಿರುದ್ಧ ಘೋಷಣೆಗಳನ್ನು ಕೂಗಿ ಪ್ರತಿಭಟಿಸಿದ್ದು. ಸಂಧಾನಕ್ಕೆ ಆ ಧೋರಣೆ ಹೇಗೆ ಪೂರಕವಾಗುತ್ತದೆ? ಈ ಹಿಂದೆ 2021ರ ಮುಂಗಾರು ಅಧಿವೇಶನದಲ್ಲಿ 20 ಮಸೂದೆಗಳು ಚರ್ಚೆಯಿಲ್ಲದೆ ಅಥವಾ ಕನಿಷ್ಠ ಚರ್ಚೆಯ ಬಳಿಕ ಅಂಗೀಕೃತವಾಗಿದ್ದವು. ಈ ಸಲದ ಮುಂಗಾರು ಅಧಿವೇಶನದಲ್ಲಿ ಒಂದರ ಹಿಂದೊಂದು ಮಸೂದೆಯು ಚರ್ಚೆಯೇ ಇಲ್ಲದೆ ತಮಗಿರುವ ಬಹುಮತದ ಆಧಾರದಲ್ಲಿ ಅಂಗೀಕೃತವಾಗುವಂತೆ ಮಾಡಿದ ಪ್ರಕ್ರಿಯೆ ಸತ್ತಾರೂಢ ಪಕ್ಷದ ಮೂಲ ಧೋರಣೆ ತಡೆಯಿಲ್ಲದೆ ಮುಂದುವರಿಯುವುದಕ್ಕೆ ಇನ್ನೊಂದು ನಿದರ್ಶನ. ಮೋದಿ ಸರಕಾರವು ಶಾಸನಗಳ ರಚನೆಗೆ ಸಂಬಂಧಿಸಿದಂತೆ ಸಂಸತ್ತಿನ ಪಾತ್ರವನ್ನು ಮೊಟಕುಗೊಳಿಸುವ ಪ್ರವೃತ್ತಿಯನ್ನು ಬೆಳೆಸಿಕೊಂಡಿದೆ. ಪ್ರಜಾಸತ್ತೆಯ ಆಧಾರ ಸ್ತಂಭವಾದ ಸಂಸತ್ತಿನಲ್ಲಿ ಅಗತ್ಯವಾದ ಚರ್ಚೆಗೆ ಅವಕಾಶ ನೀಡದೆ ಶಾಸನಗಳನ್ನು ರೂಪಿಸುವುದು ಆಡಳಿತ ಕೂಟದ ನೀತಿಯಾಗಿ ಹೊರಹೊಮ್ಮಿದೆ. ಇದು ಪ್ರಜಾಸತ್ತೆಯ ಮೇಲೆ ಮಾಡುವ ಗಂಭೀರವಾದ ಪ್ರಹಾರ ಎನ್ನಬೇಕಾಗುತ್ತದೆ.

ನಂಬಿಕೆಯ ನೆರಳಲ್ಲಿ: ಪ್ರೀತಿ, ಸಮ್ಮತಿ ಮತ್ತು ಯುವಜನರ ಬದುಕಿನ ನಡುವೆ

ಆರೋಗ್ಯಕರ ಗಂಡಸುತನ ಎಂದರೆ ಅಧಿಕಾರ ತೋರಿಸುವುದಲ್ಲ; ಭಾವನೆಗಳನ್ನು ವ್ಯಕ್ತಪಡಿಸುವುದು, ತಪ್ಪಾದಾಗ ಕ್ಷಮೆ ಕೇಳುವುದು, ನಿರಾಕರಣೆಯನ್ನು ಒಪ್ಪಿಕೊಳ್ಳುವುದು ಮತ್ತು ಮತ್ತೊಬ್ಬರ ಸ್ವಾತಂತ್ರ್ಯವನ್ನು ಗೌರವಿಸುವುದೂ ಅದರ ಭಾಗ.

ಕೆಲವು ಸುದ್ದಿಗಳು ಓದಿ ಮುಗಿದ ಮೇಲೂ ಮನಸ್ಸಿನಿಂದ ಅಳಿಯುವುದಿಲ್ಲ. ಕೊಪ್ಪಳದಲ್ಲಿ ಅಪ್ರಾಪ್ತ ಬಾಲಕಿಯೊಬ್ಬಳನ್ನು ಪ್ರೀತಿಯ ಹೆಸರಿನಲ್ಲಿ ನಂಬಿಸಿ ಲೈಂಗಿಕ ದೌರ್ಜನ್ಯ ನಡೆಸಿ, ಅದನ್ನು ವಿಡಿಯೋ ಮಾಡಿಕೊಂಡು ಸ್ನೇಹಿತರೊಂದಿಗೆ ಹಂಚಿಕೊಂಡು, ಆ ವಿಡಿಯೋವನ್ನೇ ಬೆದರಿಕೆಯಾಗಿ ಬಳಸಿಕೊಂಡು ಹಲವು ಮಂದಿ ಪದೇಪದೇ ದೌರ್ಜನ್ಯ ನಡೆಸಿದ ಪ್ರಕರಣ ಅಂತಹದ್ದು. ಪ್ರಕರಣಕ್ಕೆ ಸಂಬಂಧಿಸಿದಂತೆ ಏಳು ಮಂದಿಯನ್ನು ಬಂಧಿಸಲಾಗಿದ್ದು, ತನಿಖೆ ಮುಂದುವರಿದಿದೆ.

ಈ ಘಟನೆಗೆ ಕಾನೂನು ತನ್ನ ಕೆಲಸ ಮಾಡಬೇಕು. ತಪ್ಪಿತಸ್ಥರು ಶಿಕ್ಷೆಗೆ ಒಳಗಾಗಬೇಕು. ಆದರೆ ಪ್ರಕರಣವನ್ನು ಅಲ್ಲಿಗೇ ಮುಗಿಸಿದರೆ, ಅದರೊಳಗಿರುವ ದೊಡ್ಡ ಸಾಮಾಜಿಕ ಪ್ರಶ್ನೆ ನಮ್ಮ ಗಮನಕ್ಕೆ ಬರುವುದಿಲ್ಲ. ಪ್ರೀತಿ, ಸ್ನೇಹ ಮತ್ತು ನಂಬಿಕೆಯ ಸಂಬಂಧವೊಂದು ಯಾವ ಹಂತದಲ್ಲಿ ಮತ್ತೊಬ್ಬರ ಮೇಲೆ ಅಧಿಕಾರ ಸಾಧಿಸುವ ಸಾಧನವಾಗುತ್ತದೆ?

ಈ ಪ್ರಶ್ನೆಗೆ ಉತ್ತರ ಹುಡುಕುವಾಗ ''ಇಂದಿನ ಯುವಕರು ಹಾಳಾಗುತ್ತಿದ್ದಾರೆ'' ಎಂಬ ಸಾಮಾನ್ಯೀಕರಣಕ್ಕೆ ಹೋಗುವುದು ಸರಿಯಲ್ಲ. ಯುವಜನರೆಲ್ಲರೂ ಒಂದೇ ರೀತಿಯವರಲ್ಲ. ಅವರ ಬದುಕು ಕುಟುಂಬದ ವಾತಾವರಣ, ಶಿಕ್ಷಣ, ಆರ್ಥಿಕ ಪರಿಸ್ಥಿತಿ, ಗ್ರಾಮ ನಗರದ ಹಿನ್ನೆಲೆ, ಸ್ನೇಹ ವಲಯ, ವೈಯಕ್ತಿಕ ಅನುಭವ ಮತ್ತು ಡಿಜಿಟಲ್ ಜಗತ್ತಿನ ಸಂಪರ್ಕದಿಂದ ವಿಭಿನ್ನವಾಗಿ ರೂಪುಗೊಳ್ಳುತ್ತದೆ. ಬಹುಪಾಲು ಯುವಜನರು ಇಂತಹ ಅಪರಾಧಗಳಿಂದ ದೂರವೇ ಇದ್ದಾರೆ. ಆದರೂ ಕೆಲವು ನಿರ್ದಿಷ್ಟ ವರ್ತನೆಗಳು ಹೇಗೆ ರೂಪುಗೊಳ್ಳುತ್ತವೆ ಎಂಬುದನ್ನು ಗಂಭೀರವಾಗಿ ಪರಿಶೀಲಿಸುವ ಅಗತ್ಯವಿದೆ.

ಪ್ರೀತಿ ಯಾವಾಗ ಅಧಿಕಾರವಾಗುತ್ತದೆ?

''ಅವಳು ನನ್ನವಳು'' ಎಂಬ ಮಾತು ಪ್ರೀತಿಯಂತೆ ಕೇಳಿಸಬಹುದು. ಆದರೆ ಅದರೊಳಗೆ ಮತ್ತೊಬ್ಬರ ಮೇಲೆ ಮಾಲೀಕತ್ವದ ಭಾವನೆ ಅಡಗಿದ್ದರೆ ಅದು ಪ್ರೀತಿಯಲ್ಲ. ಪ್ರೀತಿಸುವ ವ್ಯಕ್ತಿಗೂ ತನ್ನದೇ ಆದ ಇಚ್ಛೆ, ನಿರ್ಧಾರ ಮತ್ತು ಗಡಿ ಇರುತ್ತದೆ.

ನಮ್ಮ ಲಿಂಗಸಂಸ್ಕೃತಿಯ ಕೆಲವು ಹಳೆಯ ಕಲ್ಪನೆಗಳು ಇಲ್ಲಿ ಪ್ರಭಾವ ಬೀರುತ್ತವೆ. ಹೆಣ್ಣುಮಕ್ಕಳಿಗೆ ಬಾಲ್ಯದಿಂದಲೇ ಎಚ್ಚರಿಕೆಗಳ ಪಟ್ಟಿ ಸಿಗುತ್ತದೆಯಾರನ್ನು ನಂಬಬೇಕು, ಎಲ್ಲಿಗೆ ಹೋಗಬೇಕು, ಎಷ್ಟು ಹೊತ್ತು ಹೊರಗಿರಬೇಕು. ಆದರೆ ಹುಡುಗರಿಗೆ ನಿರಾಕರಣೆಯನ್ನು ಗೌರವಿಸುವುದು, ಕೋಪವನ್ನು ನಿಭಾಯಿಸುವುದು, ಭಾವನೆಗಳನ್ನು ವ್ಯಕ್ತಪಡಿಸುವುದು ಮತ್ತು ಇನ್ನೊಬ್ಬರ ಗಡಿಯನ್ನು ಒಪ್ಪಿಕೊಳ್ಳುವುದು ಅಷ್ಟೇ ಗಂಭೀರವಾಗಿ ಕಲಿಸಲಾಗುತ್ತದೆಯೇ ಎಂಬುದು ಪರಿಶೀಲಿಸಬೇಕಾದ ಪ್ರಶ್ನೆ.

ಇದು ಎಲ್ಲ ಹುಡುಗರನ್ನೂ ಒಂದೇ ರೀತಿಯಲ್ಲಿ ನೋಡುವ ಮಾತಲ್ಲ. ಬದಲಿಗೆ, ಕೆಲವು ಕುಟುಂಬಗಳು ಮತ್ತು ಸಾಮಾಜಿಕ ಪರಿಸರಗಳಲ್ಲಿ ಪುರುಷತ್ವಕ್ಕೆ ಜೋಡಿಸಲಾಗಿರುವ ಅಧಿಕಾರದ ಕಲ್ಪನೆಗಳನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ. ''ಗಂಡು ಗಟ್ಟಿಯಾಗಿರಬೇಕು'', ''ಸೋಲಬಾರದು'', ''ತನ್ನ ಮಾತು ನಡೆಯಬೇಕು'' ಎಂಬ ಕಲ್ಪನೆಗಳ ನಡುವೆ ''ಬೇಡ ಎಂದರೆ ನಿಲ್ಲಬೇಕು'' ಎಂಬ ಮೌಲ್ಯವೂ ಸಮಾನವಾಗಿ ಬೆಳೆದರೆ ಸಂಬಂಧಗಳ ಸ್ವರೂಪ ಬದಲಾಗಬಹುದು.

ಆರೋಗ್ಯಕರ ಗಂಡಸುತನ ಎಂದರೆ ಅಧಿಕಾರ ತೋರಿಸುವುದಲ್ಲ. ಭಾವನೆಗಳನ್ನು ವ್ಯಕ್ತಪಡಿಸುವುದು, ತಪ್ಪಾದಾಗ ಕ್ಷಮೆ ಕೇಳುವುದು, ನಿರಾಕರಣೆಯನ್ನು ಒಪ್ಪಿಕೊಳ್ಳುವುದು ಮತ್ತು ಮತ್ತೊಬ್ಬರ ಸ್ವಾತಂತ್ರ್ಯವನ್ನು ಗೌರವಿಸುವುದೂ ಅದರ ಭಾಗ.

ಸಮ್ಮತಿ ಎಂದರೆ ಸರಳವಾದ ಗಡಿ

ಸಮ್ಮತಿಯ ಬಗ್ಗೆ ದೊಡ್ಡ ತತ್ವಗಳ ಅಗತ್ಯವಿಲ್ಲ. ''ಬೇಡ'' ಎಂದರೆ ಬೇಡ. ಮೌನವನ್ನು ಸಮ್ಮತಿ ಎಂದು ಅರ್ಥೈಸಲಾಗುವುದಿಲ್ಲ. ಪ್ರೀತಿಯಲ್ಲಿರುವುದು ಎಲ್ಲದಕ್ಕೂ ಒಪ್ಪಿಗೆ ಎಂದಲ್ಲ. ಒಂದು ಸಂದರ್ಭದಲ್ಲಿ ನೀಡಿದ ಒಪ್ಪಿಗೆ ಮತ್ತೊಂದು ಸಂದರ್ಭಕ್ಕೂ ಅನ್ವಯಿಸುವುದಿಲ್ಲ.

ಈ ಅರಿವು ಮನೆಯ ಸಣ್ಣ ಸಂಗತಿಗಳಿಂದಲೇ ಆರಂಭವಾಗಬಹುದು. ಮಗುವಿನ ದೇಹವನ್ನು ಅದರ ಅನುಮತಿಯಿಲ್ಲದೆ ಮುಟ್ಟದಿರುವುದು, ಇನ್ನೊಬ್ಬರ ವಸ್ತುವನ್ನು ಕೇಳದೆ ತೆಗೆದುಕೊಳ್ಳದಿರುವುದು, ಯಾರಾದರೂ ''ಬೇಡ'' ಎಂದಾಗ ಅದನ್ನು ಗೌರವಿಸುವುದುಇವು ಮುಂದೆ ಸಂಬಂಧಗಳಲ್ಲಿನ ಗಡಿಯನ್ನು ಅರ್ಥಮಾಡಿಕೊಳ್ಳುವ ನೆಲೆಯಾಗುತ್ತವೆ.

ಶಾಲೆ ಮತ್ತು ಕಾಲೇಜುಗಳಲ್ಲಿ ಸಂಬಂಧಗಳು, ವೈಯಕ್ತಿಕ ಗಡಿಗಳು, ಸಮ್ಮತಿ, ಲಿಂಗಸಮಾನತೆ ಮತ್ತು ಹೊಣೆಗಾರಿಕೆಯ ಕುರಿತು ವಯೋಸೂಕ್ತ ಚರ್ಚೆಗಳು ನಡೆಯಬೇಕಾಗಿರುವುದೂ ಇದೇ ಕಾರಣಕ್ಕೆ.

ಕೊಪ್ಪಳದ ಪ್ರಕರಣದ ಅತ್ಯಂತ ಆತಂಕಕಾರಿ ಅಂಶಗಳಲ್ಲಿ ಒಂದು ಡಿಜಿಟಲ್ ತಂತ್ರಜ್ಞಾನದ ದುರುಪಯೋಗ. ಖಾಸಗಿ ಕ್ಷಣವನ್ನು ಚಿತ್ರೀಕರಿಸಿ, ಮತ್ತೊಬ್ಬರಿಗೆ ಕಳುಹಿಸಿ, ಅದನ್ನೇ ತೋರಿಸಿ ಬೆದರಿಸುವಾಗ ವಿಡಿಯೋ ಕೇವಲ ಒಂದು ದಾಖಲೆ ಆಗಿರುವುದಿಲ್ಲ. ಅದು ವ್ಯಕ್ತಿಯ ಮೇಲೆ ನಿಯಂತ್ರಣ ಸಾಧಿಸುವ ಸಾಧನವಾಗುತ್ತದೆ.



ಇಲ್ಲಿ ಡಿಜಿಟಲ್ ಸಾಕ್ಷರತೆಯ ಅರ್ಥವನ್ನು ವಿಸ್ತರಿಸಬೇಕಾಗಿದೆ. ಮೊಬೈಲ್ ಬಳಸುವುದು ಅಥವಾ ಸಾಮಾಜಿಕ ಜಾಲತಾಣದ ಖಾತೆ ಹೊಂದಿರುವುದಷ್ಟೇ ಡಿಜಿಟಲ್ ಜ್ಞಾನವಲ್ಲ. ಮತ್ತೊಬ್ಬರ ಖಾಸಗಿತನವನ್ನು ಗೌರವಿಸುವುದು, ಯಾವ ಚಿತ್ರ ಅಥವಾ ವಿಡಿಯೋವನ್ನು ಹಂಚಬಾರದು ಎಂಬ ಅರಿವು ಮತ್ತು ಆನ್‌ಲೈನ್ ವರ್ತನೆಗೂ ಕಾನೂನಿನ ಹೊಣೆಗಾರಿಕೆ ಇದೆ ಎಂಬ ತಿಳಿವಳಿಕೆಯೂ ಅದರ ಭಾಗ.

ಅಪ್ರಾಪ್ತರನ್ನು ಒಳಗೊಂಡ ಲೈಂಗಿಕ ಚಿತ್ರ ಅಥವಾ ವಿಡಿಯೋವನ್ನು ಸೃಷ್ಟಿಸುವುದು, ಸಂಗ್ರಹಿಸುವುದು, ಹಂಚುವುದು ಅಥವಾ ಪ್ರಸಾರ ಮಾಡುವುದು ಗಂಭೀರ ಕಾನೂನು ಪರಿಣಾಮಗಳನ್ನು ಹೊಂದಿದೆ. ಪೋಕ್ಸೊ ಕಾಯ್ದೆಯ ಸೆಕ್ಷನ್ 1315 ಮಕ್ಕಳನ್ನು ಲೈಂಗಿಕ ಚಿತ್ರಣಕ್ಕಾಗಿ ಬಳಸುವುದು ಮತ್ತು ಅಂತಹ ವಸ್ತುಗಳನ್ನು ಸಂಗ್ರಹಿಸುವುದು ಅಥವಾ ಹಂಚುವುದಕ್ಕೆ ಸಂಬಂಧಿಸಿದ ಅಪರಾಧಗಳನ್ನು ನಿರ್ದಿಷ್ಟಪಡಿಸುತ್ತವೆ. ಮಾಹಿತಿ ತಂತ್ರಜ್ಞಾನ ಕಾಯ್ದೆಯ ಸೆಕ್ಷನ್ 67 ಕೂಡ ಮಕ್ಕಳನ್ನು ಒಳಗೊಂಡ ಲೈಂಗಿಕವಾಗಿ ಸ್ಪಷ್ಟವಾದ ವಸ್ತುಗಳ ಪ್ರಕಟಣೆ, ಪ್ರಸಾರ, ಸಂಗ್ರಹಣೆ ಮುಂತಾದವುಗಳನ್ನು ಅಪರಾಧವೆಂದು ಪರಿಗಣಿಸುತ್ತದೆ.

ಹೀಗಾಗಿ ''ನಾನು ಕೇವಲ ಫಾರ್ವರ್ಡ್ ಮಾಡಿದೆ'' ಎನ್ನುವುದು ನಿರಪರಾಧಿತ್ವದ ಸರಳ ನೆಪವಲ್ಲ.

ಯ 2023ರ ಮಾಹಿತಿಯ ಪ್ರಕಾರ, ಕಾಯ್ದೆಯ ಸೆಕ್ಷನ್ 4 ಮತ್ತು 6 ಅಡಿಯಲ್ಲಿ ದಾಖಲಾಗಿದ್ದ 40,434 ಪ್ರಕರಣಗಳಲ್ಲಿ 96.6% ಪ್ರಕರಣಗಳಲ್ಲಿ ಆರೋಪಿಗಳು ಸಂತ್ರಸ್ತರಿಗೆ ಪರಿಚಿತರಾಗಿದ್ದರು.

ಈ ಅಂಕಿಅಂಶ ಮಕ್ಕಳ ಸುರಕ್ಷತೆಯ ಬಗ್ಗೆ ಇರುವ ಒಂದು ಸಾಮಾನ್ಯ ಕಲ್ಪನೆಯನ್ನು ಬದಲಿಸುತ್ತದೆ. ಅಪಾಯ ಎಂದರೆ ಅಪರಿಚಿತ ವ್ಯಕ್ತಿಯಿಂದ ಮಾತ್ರ ಬರುವುದಿಲ್ಲ. ಪರಿಚಯ, ಸ್ನೇಹ, ಪ್ರೀತಿ ಅಥವಾ ನಂಬಿಕೆಯ ಸಂಬಂಧಗಳೊಳಗೂ ಗಡಿ ಉಲ್ಲಂಘನೆಯಾಗಬಹುದು. ಆದ್ದರಿಂದ ಮಕ್ಕಳಿಗೆ ಅಪರಿಚಿತರ ಬಗ್ಗೆ ಎಚ್ಚರಿಕೆ ನೀಡುವುದರ ಜೊತೆಗೆ, ಪರಿಚಿತ ವ್ಯಕ್ತಿಯ ವರ್ತನೆಯಲ್ಲೂ ಅಸಹಜತೆಯನ್ನು ಗುರುತಿಸುವ ಸಾಮರ್ಥ್ಯ ಬೇಕಾಗುತ್ತದೆ.

ಒಂದು ಅಪರಾಧದ ಪರಿಣಾಮ ಅಷ್ಟಕ್ಕೇ ಮುಗಿಯುವುದಿಲ್ಲ

ಕೊಪ್ಪಳದ ಬಾಲಕಿ ಸುಮಾರು ಎರಡು ವರ್ಷಗಳ ಕಾಲ ದೌರ್ಜನ್ಯ ಮತ್ತು ಬೆದರಿಕೆಯ ನಡುವೆ ಬದುಕಿದ್ದಾಳೆ ಎಂದು ವರದಿಯಾಗಿದೆ. ಆಕೆ ಗರ್ಭಿಣಿಯಾಗಿರುವುದಾಗಿಯೂ ವರದಿಯಾಗಿದೆ. ದೌರ್ಜನ್ಯದಿಂದ ಆಕೆಯ ಶಿಕ್ಷಣ ನಿಂತಿದೆ. ಒಮ್ಮೆ ವಿದ್ಯಾರ್ಥಿನಿಯಾಗಿದ್ದ ಆಕೆಯ ಬದುಕಿನ ದಿಕ್ಕೇ ಬದಲಾಗಿದೆ.

ಇದನ್ನು ಕೇವಲ ''ಶಿಕ್ಷಣ ಮೊಟಕುಗೊಂಡಿತು'' ಎಂಬ ಮಾಹಿತಿಯಾಗಿ ನೋಡುವುದು ಸಾಲದು. ಭಯದಿಂದ ಕಳೆದುಹೋದ ವರ್ಷಗಳು, ನಂಬಿಕೆಯ ಮೇಲೆ ಬಿದ್ದ ಗಾಯ, ಆತ್ಮವಿಶ್ವಾಸಕ್ಕೆ ಉಂಟಾದ ಧಕ್ಕೆಇವೆಲ್ಲವೂ ಆ ಘಟನೆಯ ಪರಿಣಾಮಗಳೇ.

ಆದರೆ ಇಲ್ಲಿ ಒಂದು ಮಾತು ಸ್ಪಷ್ಟವಾಗಿರಬೇಕು. ಆಕೆಯ ಬದುಕಿಗೆ ಹಾನಿ ಮಾಡಿದ್ದು ಆಕೆ ಮಾಡಿದ ಆಯ್ಕೆಯಲ್ಲ; ಆಕೆಯ ನಂಬಿಕೆಯನ್ನು ದುರುಪಯೋಗಪಡಿಸಿಕೊಂಡವರ ಕೃತ್ಯ. ಅವಳು ಯಾರನ್ನಾದರೂ ಪ್ರೀತಿಸಿದ್ದು ತಪ್ಪಲ್ಲ. ಯಾರನ್ನಾದರೂ ನಂಬಿದ್ದೂ ತಪ್ಪಲ್ಲ. ಅಪರಾಧದ ಹೊಣೆ ಅವಳ ಮೇಲೆ ಇರಬಾರದು.

ಆಕೆಯ ಮುಂದಿನ ಬದುಕನ್ನೂ ಆ ಅಪರಾಧವೇ ನಿರ್ಧರಿಸಬೇಕಿಲ್ಲ. ಮತ್ತೆ ಶಿಕ್ಷಣ ಪಡೆಯಲು, ಸುರಕ್ಷಿತವಾಗಿ ಬದುಕಲು, ಸಂಬಂಧಗಳನ್ನು ತನ್ನ ಆಯ್ಕೆಯಿಂದ ರೂಪಿಸಿಕೊಳ್ಳಲು ಮತ್ತು ತನ್ನ ಭವಿಷ್ಯದ ಮೇಲೆ ಹಕ್ಕು ಸಾಧಿಸಲು ಅವಕಾಶ ದೊರೆಯುವುದು ನ್ಯಾಯದ ಮತ್ತೊಂದು ಮುಖ.

ಮೌನವನ್ನು ದೋಷವನ್ನಾಗಿಸಬಾರದು

ಬಾಲಕಿ ದೀರ್ಘಕಾಲ ಮೌನವಾಗಿದ್ದಾಳೆ. ''ಏಕೆ ಮೊದಲೇ ಹೇಳಲಿಲ್ಲ?'' ಎಂದು ಕೇಳುವುದು ಸುಲಭ. ಆದರೆ ಬೆದರಿಕೆ, ಅವಮಾನ, ಕುಟುಂಬದ ಭಯ ಮತ್ತು ವಿಡಿಯೋ ಹೊರಬರುವ ಆತಂಕ ಒಬ್ಬರನ್ನು ಮೌನವಾಗಿರಿಸಬಹುದು.

ಆದ್ದರಿಂದ ದೂರು ನೀಡುವ ಮಗುವಿನ ಮುಂದೆ ಮೊದಲ ಪ್ರತಿಕ್ರಿಯೆ ಅನುಮಾನವಾಗಬಾರದು. ಅವಳ ಮಾತನ್ನು ಕೇಳುವುದು, ಸುರಕ್ಷತೆ ಒದಗಿಸುವುದು ಮತ್ತು ಅಗತ್ಯ ನೆರವು ನೀಡುವುದು ಮುಖ್ಯ.

ಕುಟುಂಬ, ಶಿಕ್ಷಣ ಸಂಸ್ಥೆಗಳು, ಪೊಲೀಸರು ಮತ್ತು ಕೌನ್ಸಿಲರ್‌ಗಳು ಇಂತಹ ಸಂದರ್ಭಗಳಲ್ಲಿ ಮಗುವಿಗೆ ಮತ್ತೊಂದು ಭಯದ ಸ್ಥಳವಾಗದೆ, ನೆರವು ಸಿಗುವ ಸ್ಥಳವಾಗಬೇಕು. ಕಾನೂನು ನೆರವು, ವೈದ್ಯಕೀಯ ನೆರವು ಮತ್ತು ಮನೋಸಾಮಾಜಿಕ ಬೆಂಬಲ ಪುನರ್ವಸತಿಯ ಭಾಗವಾಗಬೇಕು.

ಹೊಕ್ರಾಣಿ ಘಟನೆ ಹೇಳುವ ಮತ್ತೊಂದು ಅಸುರಕ್ಷತೆ

ಇದೇ ಸಂದರ್ಭದಲ್ಲಿ ರಾಯಚೂರು ಜಿಲ್ಲೆಯ ಸಿರವಾರ ತಾಲೂಕಿನ ಹೊಕ್ರಾಣಿ ಗ್ರಾಮದಲ್ಲಿ 18 ವರ್ಷದ ಯುವತಿಯ ಶವ ಬಾವಿಯಲ್ಲಿ ಪತ್ತೆಯಾದ ಘಟನೆ ವರದಿಯಾಗಿದೆ. ಆಕೆಯ ಮೇಲೆ ಅತ್ಯಾಚಾರ ಎಸಗಿ ಹತ್ಯೆ ಮಾಡಿರುವ ಶಂಕೆಯ ಕುರಿತು ತನಿಖೆ ನಡೆಯುತ್ತಿದೆ.

ಈ ಪ್ರಕರಣವನ್ನು ಕೊಪ್ಪಳದ ಪ್ರಕರಣದೊಂದಿಗೆ ಒಂದೇ ಕಾರಣದಿಂದ ಜೋಡಿಸಲಾಗುವುದಿಲ್ಲ. ಎರಡೂ ಘಟನೆಗಳ ಸಂದರ್ಭಗಳು ಭಿನ್ನವಾಗಿವೆ. ಆದರೆ ಹೊಕ್ರಾಣಿ ಘಟನೆ ಮಹಿಳೆಯರ ಸುರಕ್ಷತೆಯನ್ನು ಕೇವಲ ವೈಯಕ್ತಿಕ ಎಚ್ಚರಿಕೆಯ ಪ್ರಶ್ನೆಯಾಗಿ ನೋಡುವುದು ಸಾಕಾಗುವುದಿಲ್ಲ ಎಂಬುದನ್ನು ನೆನಪಿಸುತ್ತದೆ.

ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಸುರಕ್ಷಿತ ದಾರಿ, ಬೆಳಕು, ಶೌಚಾಲಯ ಸೇರಿದಂತೆ ಮೂಲಭೂತ ಸೌಲಭ್ಯಗಳ ಕೊರತೆ ಮಹಿಳೆಯರ ದೈನಂದಿನ ಬದುಕಿನ ಸ್ವಾತಂತ್ರ್ಯಕ್ಕೂ ಪರಿಣಾಮ ಬೀರುತ್ತದೆ. ಹೊಕ್ರಾಣಿ ಪ್ರಕರಣದಲ್ಲಿ ಯುವತಿ ದಲಿತ ಸಮುದಾಯಕ್ಕೆ ಸೇರಿದವಳು ಎಂಬ ವರದಿಯೂ ಇರುವುದರಿಂದ, ಮಹಿಳೆಯರ ಬದುಕನ್ನು ಅರ್ಥಮಾಡಿಕೊಳ್ಳುವಾಗ ಜಾತಿ, ವರ್ಗ ಮತ್ತು ಸ್ಥಳೀಯ ಸಾಮಾಜಿಕ ಪರಿಸ್ಥಿತಿಗಳನ್ನೂ ಕಡೆಗಣಿಸಲಾಗುವುದಿಲ್ಲ.

ಬದಲಾವಣೆ ಎಲ್ಲಿಂದ ಆರಂಭವಾಗುತ್ತದೆ?

ಯುವಜನರನ್ನು ಒಟ್ಟಾರೆ ಅಪರಾಧಿಗಳಂತೆ ನೋಡುವುದು ಸಮಸ್ಯೆಗೆ ಪರಿಹಾರವಲ್ಲ. ಬದಲಿಗೆ, ಕೆಲವು ಯುವಜನರು ಬೆಳೆದುಬರುವ ಪರಿಸರದಲ್ಲಿ ಅಧಿಕಾರ, ನಿರಾಕರಣೆ, ಪ್ರೀತಿ ಮತ್ತು ಖಾಸಗಿತನದ ಬಗ್ಗೆ ಯಾವ ಕಲ್ಪನೆಗಳು ರೂಪುಗೊಳ್ಳುತ್ತವೆ ಎಂಬುದನ್ನು ಗಮನಿಸಬೇಕು.

ಸ್ನೇಹಿತರ ಗುಂಪಿನಲ್ಲಿ ಖಾಸಗಿ ವಿಡಿಯೋ ಬಂದಾಗ ಅದನ್ನು ಹಂಚದೆ ನಿಲ್ಲಿಸುವುದು, ತಪ್ಪು ನಡೆಯುತ್ತಿದ್ದರೆ ಸ್ನೇಹಿತನನ್ನೇ ತಡೆಯುವುದು, ಮನೆಯಲ್ಲಿ ಮಗುವಿನ ''ಬೇಡ''ವನ್ನು ಗೌರವಿಸುವುದು, ಶಾಲೆಯಲ್ಲಿ ಸಂಬಂಧಗಳ ಬಗ್ಗೆ ಮಾತನಾಡಲು ಅವಕಾಶ ನೀಡುವುದುಇವು ಸಣ್ಣ ಬದಲಾವಣೆಗಳಂತೆ ಕಾಣಬಹುದು. ಆದರೆ, ಸಾಮಾಜಿಕ ಮೌಲ್ಯಗಳು ಇಂತಹ ದೈನಂದಿನ ವರ್ತನೆಗಳಿಂದಲೇ ರೂಪುಗೊಳ್ಳುತ್ತವೆ.

ಹೆಣ್ಣುಮಕ್ಕಳಿಗೆ ಮಾತ್ರ ಎಚ್ಚರಿಕೆ ನೀಡುವುದರಿಂದ ಸುರಕ್ಷತೆ ಸಂಪೂರ್ಣವಾಗುವುದಿಲ್ಲ. ಹುಡುಗರಿಗೂ ತಮ್ಮ ವರ್ತನೆಯ ಜವಾಬ್ದಾರಿ, ನಿರಾಕರಣೆಯ ಗೌರವ ಮತ್ತು ಮತ್ತೊಬ್ಬರ ಸ್ವಾತಂತ್ರ್ಯದ ಅರ್ಥ ತಿಳಿಯಬೇಕು.

ಕಾನೂನು ತಪ್ಪಿತಸ್ಥರನ್ನು ಶಿಕ್ಷಿಸುವುದು ಅಗತ್ಯ. ಆದರೆ ಒಂದು ಪ್ರಕರಣದ ತೀರ್ಪಿನಿಂದ ಅದರ ಸಾಮಾಜಿಕ ಕಾರಣಗಳು ಮುಗಿಯುವುದಿಲ್ಲ. ಕುಟುಂಬ, ಶಿಕ್ಷಣ, ಸ್ನೇಹ ಮತ್ತು ಡಿಜಿಟಲ್ ಬದುಕಿನೊಳಗೆ ಸಂಬಂಧಗಳ ಅರ್ಥವನ್ನು ಹೆಚ್ಚು ಸಮಾನವಾಗಿ ಮತ್ತು ಜವಾಬ್ದಾರಿಯುತವಾಗಿ ಕಟ್ಟಿಕೊಳ್ಳುವ ಕೆಲಸ ಮುಂದುವರಿಯಬೇಕಾಗುತ್ತದೆ.

ಉಚಿತವಾಗಿರಲಿ ಯುಪಿಐ; ಶುಲ್ಕ ಪ್ರಸ್ತಾಪ ಅಪಾಯಕಾರಿ

ಡಿಜಿಟಲ್ ಪಾವತಿಯು ನಗದಿಗಿಂತ ಎಂದಿಗೂ ದುಬಾರಿಯಾಗುವುದಿಲ್ಲ ಎಂಬ ಸರಳ ನಂಬಿಕೆಯ ಮೇಲೆ ಈ ಯಶಸ್ಸು ನಿಂತಿದೆ. ಯುಪಿಐ ಅನ್ನು ಉಚಿತವಾಗಿಯೇ ಉಳಿಸಿ, ಅದರಿಂದ ಸರ್ಕಾರಕ್ಕಾಗುವ ನೈಜ ಉಳಿತಾಯದಿಂದಲೇ ಅದಕ್ಕೆ ಅನುದಾನ ನೀಡುವುದೇ ನಿಜವಾದ ಡಿಜಿಟಲ್ ಇಂಡಿಯಾದ ಹಾದಿ.

ದೇಶದಲ್ಲಿ ಮೊಬೈಲ್ ಪಾವತಿಗಳ ಮೇಲಿನ ಮರ್ಚೆಂಟ್ ಡಿಸ್ಕೌಂಟ್ ರೇಟ್ (ಅಥವಾ ವ್ಯಾಪಾರಿ ರೇಟ್) ರದ್ದುಗೊಳಿಸುವುದು ಡಿಜಿಟಲ್ ತಂತ್ರಜ್ಞಾನದ ಆರಂಭಿಕ ಹಂತದಲ್ಲಿ ಅಗತ್ಯವಾಗಿತ್ತು. ಆದರೆ, ಇತ್ತೀಚೆಗೆ ಕೇಂದ್ರ ಸರ್ಕಾರ ತೆರಿಗೆ ಮತ್ತು ಇತರ ಕಾಯ್ದೆಗಳ (ತಿದ್ದುಪಡಿ) ವಿಧೇಯಕ, 2026 ಅನ್ನು ಅಂಗೀಕರಿಸಿದ್ದು, ಪಾವತಿ ಮತ್ತು ಇತ್ಯರ್ಥ ವ್ಯವಸ್ಥೆಗಳ ಕಾಯ್ದೆಯ ಸೆಕ್ಷನ್ 10 ಗೆ ತಿದ್ದುಪಡಿ ತಂದಿದೆ. ಈ ಹಿಂದೆ ಭೀಮ್-ಯುಪಿಐ ಮತ್ತು ರೂಪೇ () ಪಾವತಿಗಳ ಮೇಲೆ ಯಾವುದೇ ಶುಲ್ಕ ವಿಧಿಸುವುದನ್ನು ಈ ಕಾಯ್ದೆ ಸಂಪೂರ್ಣವಾಗಿ ತಡೆದಿತ್ತು. ಆದರೆ ಪ್ರಸ್ತುತ ತಿದ್ದುಪಡಿಯು ಭವಿಷ್ಯದಲ್ಲಿ ಸರ್ಕಾರ ಮನಸ್ಸು ಮಾಡಿದರೆ ಶುಲ್ಕ ವಿಧಿಸಲು ಅವಕಾಶ ಮಾಡಿಕೊಡುವ ಬಾಗಿಲನ್ನು ತೆರೆದಿದೆ. ಸದ್ಯಕ್ಕೆ ಯಾವುದೇ ಶುಲ್ಕ ಹೇರದೆ ಇದ್ದರೂ, ಶುಲ್ಕ ವಿಧಿಸುವ ಹಾದಿ ಸುಗಮವಾಗಿರುವುದು ಕಳವಳಕಾರಿ ವಿಷಯ.

ಇಂದು ಯುಪಿಐ ದೇಶದ ಜನರ ದೈನಂದಿನ ಜೀವನದ ಅವಿಭಾಜ್ಯ ಅಂಗವಾಗಿದೆ. 2025-26ರ ಸಾಲಿನಲ್ಲಿ ಯುಪಿಐ ಮುಖಾಂತರ ಸುಮಾರು 24,000 ಕೋಟಿಗೂ ಅಧಿಕ ವಹಿವಾಟುಗಳು ನಡೆದಿದೆ. ಇದರ ಮೌಲ್ಯ ಸುಮಾರು 314 ಲಕ್ಷ ಕೋಟಿ ರೂಪಾಯಿಗಳಾಗಿವೆ. ದೇಶದ ಶೇ.85ರಷ್ಟು ಡಿಜಿಟಲ್ ಚಿಲ್ಲರೆ ಪಾವತಿಗಳು ಯುಪಿಐ ಮೂಲಕವೇ ನಡೆಯುತ್ತಿವೆ. ಗಮನಿಸಬೇಕಾದ ಅಂಶವೆಂದರೆ, ಯುಪಿಐ ವ್ಯವಸ್ಥೆಯಲ್ಲಿ ನಡೆಯುವ ಶೇ.86ರಷ್ಟು ವ್ಯಾಪಾರಿ ಪಾವತಿಗಳು 500 ರೂಪಾಯಿಗಳಿಗಿಂತ ಕಡಿಮೆ ಮೌಲ್ಯದವು. ಅಂದರೆ ತರಕಾರಿ ಮಾರಾಟಗಾರರು, ಆಟೋ ಚಾಲಕರು ಮತ್ತು ಸಣ್ಣ ಕಿರಾಣಿ ಅಂಗಡಿಯವರು ಈ ವ್ಯವಸ್ಥೆಯನ್ನು ಹೆಚ್ಚಾಗಿ ನೆಚ್ಚಿಕೊಂಡಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಯುಪಿಐ ಮೇಲೆ ಶುಲ್ಕ ವಿಧಿಸುವುದು ಎಂದರೆ ಅದು ಕೇವಲ ವಾಣಿಜ್ಯ ವ್ಯವಹಾರದ ಮೇಲಿನ ತೆರಿಗೆಯಾಗದೆ, ದೇಶದ ಅತ್ಯಂತ ಬಡ ಮತ್ತು ಸಣ್ಣ ಮಟ್ಟದ ವಹಿವಾಟುದಾರರ ಮೇಲೆ ಹೇರುವ ಸುಂಕವಾಗುತ್ತದೆ.

ಡಿಜಿಟಲ್ ಗುರುತಿನ ಚೀಟಿಯ ನಂತರ, ಯುಪಿಐ ದೇಶದ ಅತ್ಯಂತ ಪ್ರಮುಖ ಸಾರ್ವಜನಿಕ ಡಿಜಿಟಲ್ ಮೂಲಸೌಕರ್ಯವಾಗಿದೆ. ಇದು ಯಾವುದೇ ಖಾಸಗಿ ಕಂಪನಿಯ ಉತ್ಪನ್ನವಲ್ಲ, ಬದಲಾಗಿ ಇದು ಒಂದು ಮುಕ್ತ ಮತ್ತು ಸಾರ್ವಜನಿಕ ಸ್ವತ್ತು. ಹಿಂದೆ ಪ್ರತಿಯೊಂದು ಬ್ಯಾಂಕ್ ತನ್ನದೇ ಆದ ಅಪ್ಲಿಕೇಶನ್ ಹೊಂದಿದ್ದವು. ಆದರೆ ಯುಪಿಐ ಬಂದ ನಂತರ ಯಾವುದೇ ಅಪ್ಲಿಕೇಶನ್‌ನಿಂದ ಯಾವುದೇ ಬ್ಯಾಂಕ್ ಖಾತೆಗೆ ಉಚಿತವಾಗಿ, ತಕ್ಷಣವೇ ಹಣ ವರ್ಗಾಯಿಸುವ ವ್ಯವಸ್ಥೆ ನಿರ್ಮಾಣವಾಯಿತು. ಜಗತ್ತಿನ ಹಲವು ದೇಶಗಳು ಇಂದು ಭಾರತದ ಈ ಮಾದರಿಯನ್ನು ಪಾಲಿಸುತ್ತಿದೆ.

ಕಾರ್ಡ್ ಆಧಾರಿತ ವಹಿವಾಟುಗಳಲ್ಲಿ ಪಿಒಎಸ್ ಯಂತ್ರ, ಭೌತಿಕ ಕಾರ್ಡ್ ಹಾಗೂ ಕ್ರೆಡಿಟ್ ಅಪಾಯಗಳಿರುತ್ತವೆ. ಆದ್ದರಿಂದ ಅಲ್ಲಿ ಶುಲ್ಕ ಸಮಂಜಸ ಎನಿಸುತ್ತದೆ. ಆದರೆ ಯುಪಿಐನಲ್ಲಿ ಗ್ರಾಹಕರ ಮೊಬೈಲ್ ಫೋನ್ ಮತ್ತು ಅವರ ಸ್ವಂತ ಡೇಟಾ ಬಳಸಲ್ಪಡುತ್ತದೆ. ಇಲ್ಲಿ ಯಾವುದೇ ನೆಟ್‌ವರ್ಕ್ ಅಥವಾ ಕಾರ್ಡ್ ಅಪಾಯಗಳಿರುವುದಿಲ್ಲ. ಎನ್‌ಪಿಸಿಐ ವರ್ಷಕ್ಕೆ ಸುಮಾರು 500 ಕೋಟಿ ರೂಪಾಯಿ ವೆಚ್ಚದಲ್ಲಿ ಈ ಇಡೀ ವ್ಯವಸ್ಥೆಯನ್ನು ನಡೆಸುತ್ತಿದೆ. ಅಂದರೆ ಒಂದು ವಹಿವಾಟಿಗೆ ತಗುಲುವ ವೆಚ್ಚ ಕೇವಲ 2 ಪೈಸೆ ಮಾತ್ರ! ಹೀಗಿರುವಾಗ ಕಾರ್ಡ್‌ಗಳ ಮಾದರಿಯಲ್ಲಿ ಇಲ್ಲೂ ಹೇರುವುದು ಸಂಪೂರ್ಣವಾಗಿ ತಪ್ಪಾಗುತ್ತದೆ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR